



(ಅವತೀರ್ಣ - ಮದೀನಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللَّهِ الرَّحْمَٰنِ الرَّحِيمِ ○

1. ಜನರೇ ನಿಮ್ಮ ಪ್ರಭುವಿನ ಕ್ರೋಧವನ್ನು ಭಯಪಡಿರಿ. ವಾಸ್ತವದಲ್ಲಿ ಪುನರುತ್ಥಾನದ ಘಳಿಗೆಯ ಮಹಾಕಂಪನವು (ಭಯಾನಕ) ವಿಷಯವಾಗಿದೆ.

يَا أَيُّهَا النَّاسُ اتَّقُوا رَبَّكُمْ ۚ إِنَّ
زَلْزَلَةَ السَّاعَةِ شَيْءٌ عَظِيمٌ ①

2. ನೀವು ಅದನ್ನು ಕಾಣುವಂದು ಹಾಲುಣಿಸುವವಳು ಹಾಲುಣ್ಣುವ ತನ್ನ ಶಿಶುವನ್ನು ಮರೆತು ಬಿಡುವಳು. ಪ್ರತಿಯೊಬ್ಬ ಗರ್ಭಿಣಿಗೆ ಗರ್ಭಪಾತವಾಗಿ ಬಿಡುವುದು. ಜನರು ನಿಮಗೆ ಉನ್ಮತ್ತರಂತೆ ತೋರುವರು. ವಸ್ತುತಃ ಅವರು ಉನ್ಮತ್ತರಾಗಿರಲಾರರು. ನಿಜವಾಗಿ ಅಲ್ಲಾಹನ ಯಾತನೆಯೇ ಅಷ್ಟು ಭೀಕರವಾಗಿರುವುದು.

يَوْمَ تَرَوْنَهَا تَذْهَلُ كُلُّ مُرْضِعَةٍ
عَمَّا أَرْضَعَتْ وَتَضَعُ كُلُّ ذَاتِ حَمْلٍ
حَمْلَهَا وَتَرَى النَّاسَ سُكَارَىٰ وَمَا
هُمْ بِسُكَارَىٰ وَلَٰكِنَّ عَذَابَ اللَّهِ
شَدِيدٌ ②

3. ಜನರಲ್ಲಿ ಕೆಲವರು ತಿಳುವಳಿಕೆ ಇಲ್ಲದೆಯೇ ಅಲ್ಲಾಹನ ಬಗ್ಗೆ ವಾದ - ವಿವಾದ ನಡೆಸುತ್ತಾರೆ ಮತ್ತು ಪ್ರತಿಯೋರ್ವ ಉದ್ಧಟ ಶೈತಾನನನ್ನು ಅನುಸರಿಸುತ್ತಾರೆ.

وَمِنَ النَّاسِ مَنْ يُجَادِلُ فِي اللَّهِ بِغَيْرِ
عِلْمٍ وَيَتَّبِعُ كُلَّ شَيْطَانٍ مَرِيدٍ ③

4. ವಸ್ತುತಃ ಅವನನ್ನು ತನ್ನ ಮಿತ್ರನಾಗಿ ಮಾಡಿಕೊಳ್ಳುವವನನ್ನು ಆತನು ಪಥಭ್ರಷ್ಟಗೊಳಿಸಿಯೇ ತೀರುವನು ಮತ್ತು ನರಕದ ಯಾತನೆಯ ದಾರಿ ತೋರಿಸುವನು ಎಂದು ಅವನ ಅದೃಷ್ಟದಲ್ಲೇ ಬರೆದಿದೆ.

كُتِبَ عَلَيْهِ أَنَّهُ مَنْ تَوَلَّاهُ فَأَنَّهُ
يُضِلُّهُ وَيَهْدِيهِ إِلَىٰ عَذَابِ السَّعِيرِ ④

5. ಜನರೇ, ನಿಮಗೆ ಮರಣಾ ನಂತರದ ಜೀವನದ ಬಗೆಗೇನಾದರೂ ಸಂಶಯವಿದ್ದರೆ, ನಾವು ನಿಮ್ಮನ್ನು ಮಣ್ಣಿನಿಂದಲೂ ಅನಂತರ ವೀರ್ಯದಿಂದಲೂ ಆಮೇಲೆ ರಕ್ತ ಪಿಂಡದಿಂದಲೂ ಆ ಬಳಿಕ ರೂಪವಿರುವ ಮತ್ತು ರೂಪವಿಲ್ಲದ ಮಾಂಸದ ತುಣುಕಿನಿಂದಲೂ

يَا أَيُّهَا النَّاسُ إِنْ كُنْتُمْ فِي رَيْبٍ مِنَ
الْبَعْثِ فَإِنَّا خَلَقْنَاكُمْ مِنْ تُرَابٍ ثُمَّ
مِنْ نُطْفَةٍ ثُمَّ مِنْ عَلَقَةٍ ثُمَّ مِنْ

ಸೃಷ್ಟಿಸಿದೆವು ಎಂಬುದು ನಿಮಗೆ ತಿಳಿದಿರಲಿ. ನಿಮಗೆ ವಸ್ತುಸ್ಥಿತಿ ವಿವರಿಸಲಿಕ್ಕಾಗಿ (ನಾವು ಇದನ್ನು ತಿಳಿಸುತ್ತಿದ್ದೇವೆ). ನಾವು ನಮಗಿಷ್ಟವಿರುವುದನ್ನು (ವೀರ್ಯವನ್ನು) ಒಂದು ನಿರ್ದಿಷ್ಟ ಅವಧಿಯ ತನಕ ಗರ್ಭಾಶಯದೊಳಗೆ ತಡೆದಿರಿಸುತ್ತೇವೆ. ಅನಂತರ ನಿಮ್ಮನ್ನು ಒಂದು ಶಿಶುವಿನ ರೂಪದಲ್ಲಿ ಹೊರ ತರುತ್ತೇವೆ. (ತರುವಾಯ) ನೀವು ತಾರುಣ್ಯಕ್ಕೆ ತಲುಪುವಂತಾಗಲು (ನಿಮ್ಮನ್ನು ಪೋಷಿಸುತ್ತೇವೆ) ಮತ್ತು ನಿಮ್ಮಲ್ಲಿ ಕೆಲವರನ್ನು ಮೊದಲೇ ಹಿಂದಕ್ಕೆ ಕರೆಸಿ ಕೊಳ್ಳಲಾಗುತ್ತದೆ ಮತ್ತು ಕೆಲವರನ್ನು ಎಲ್ಲವನ್ನೂ ತಿಳಿದುಕೊಂಡ ಬಳಿಕ ಏನೂ ತಿಳಿಯದಂತಾಗಲು ಅತಿ ವೃದ್ಧಾಪ್ಯದೆಡೆಗೆ ತಿರುಗಿಸಿ ಬಿಡಲಾಗುತ್ತದೆ. ನೆಲವು ಒಣಗಿರುವುದನ್ನು ನೀವು ನೋಡುತ್ತೀರಿ. ಅನಂತರ ನಾವು ಅದರ ಮೇಲೆ ಮಳೆಗೆರೆದಾಗ ಅದು ಒಮ್ಮೆಲೇ ಮೊಳೆಯಿತು, ಉಬ್ಬಿತು ಮತ್ತು ಎಲ್ಲ ಬಗೆಯ ನಯನ ಮನೋಹರ ಸಸ್ಯಗಳನ್ನು ಹೊರಗೆಡಹ ತೊಡಗಿಬಿಟ್ಟಿತು.

مُّضْغَةٍ مُّخَلَّقَةٍ وَّغَيْرِ مُخَلَّقَةٍ
لِّنُبَيِّنَ لَكُمْ ۗ وَنُقِرُّ فِي الْأَرْحَامِ مَا
نَشَاءُ إِلَىٰ أَجَلٍ مُّسَمًّى ثُمَّ نُخْرِجُكُمْ
طِفْلًا ثُمَّ لِتَبْلُغُوا أَشُدَّكُمْ ۚ وَمِنكُم
مَّن يُتَوَفَّىٰ وَمِنكُم مَّن يُرَدُّ إِلَىٰ أَرْذَلِ
الْعُمُرِ لِكَيْلَا يَعْلَمَ مِن بَعْدِ عِلْمٍ شَيْئًا ۗ
وَتَرَى الْأَرْضَ هَامِدَةً فَإِذَا أَنزَلْنَا
عَلَيْهَا الْمَاءَ اهْتَزَّتْ وَرَبَتْ وَأَنبَتَتْ
مِن كُلِّ زَوْجٍ بَهِيجٍ ﴿٥﴾

6. ಇವೆಲ್ಲ ಆಗುವುದಕ್ಕೆ ಕಾರಣ ಅಲ್ಲಾಹನೇ ಪರಮ ಸತ್ಯವಾಗಿರುವುದು. ಅವನು ಮೃತರನ್ನು ಜೀವಂತಗೊಳಿಸುತ್ತಾನೆ ಮತ್ತು ಸರ್ವ ವಿಷಯಗಳ ಮೇಲೆ ಸಾಮರ್ಥ್ಯವುಳ್ಳವನಾಗಿರುತ್ತಾನೆ.

ذَٰلِكَ بِأَنَّ اللَّهَ هُوَ الْحَقُّ وَأَنَّهُ يُحْيِي
الْمَوْتَىٰ وَأَنَّهُ عَلَىٰ كُلِّ شَيْءٍ قَدِيرٌ ﴿٦﴾

7. ಪುನರುತ್ಥಾನದ ಘಳಿಗೆಯು ಬಂದೇ ತೀರುವುದು (ಎಂಬುದಕ್ಕಿದು ಆಧಾರವಾಗಿದೆ) ಇದರಲ್ಲಿ ಸಂಶಯಕ್ಕೆ ಅವಕಾಶವೇ ಇಲ್ಲ ಮತ್ತು ಸಮಾಧಿಗಳೊಳಗೆ ಹೋಗಿರುವವರನ್ನು ಅಲ್ಲಾಹನು ಖಂಡಿತವಾಗಿಯೂ ಎಬ್ಬಿಸುವನು.

وَّأَنَّ السَّاعَةَ آتِيَةٌ لَّا رَيْبَ فِيهَا
وَأَنَّ اللَّهَ يَبْعَثُ مَن فِي الْقُبُورِ ﴿٧﴾

8. ಮತ್ತೆ ಕೆಲವರು ಯಾವುದೇ ಜ್ಞಾನ, ಸನ್ಮಾರ್ಗದರ್ಶನ ಮತ್ತು ಪ್ರಕಾಶ ನೀಡುವಂತಹ ಗ್ರಂಥದ ಹೊರತಾಗಿಯೇ ಅಲ್ಲಾಹನ ವಿಷಯದಲ್ಲಿ ಜಗಳಾಡುವವರಿದ್ದಾರೆ.

وَمِنَ النَّاسِ مَن يُجَادِلُ فِي اللَّهِ بِغَيْرِ
عِلْمٍ وَّلَا هُدًى وَّلَا كِتَابٍ مُّنِيرٍ ﴿٨﴾

9. ಕೊರಳನ್ನು ಸೆಟೆಯುತ್ತ ಜನರನ್ನು ದೇವ ಮಾರ್ಗದಿಂದ ತಪ್ಪಿಸಲಿಕ್ಕಾಗಿ (ಅವರು ಹೀಗೆ ಮಾಡುತ್ತಾರೆ). ಇಂತಹವನಿಗೆ ಈ ಲೋಕದಲ್ಲಿ ಅಪಮಾನವಿದೆ. ಪುನರುತ್ಥಾನದ ದಿನ ನಾವು ಅವನಿಗೆ ನರಕಾಗ್ನಿಯ ಶಿಕ್ಷೆಯ ಸವಿಯನ್ನು ಉಣಿಸುವೆವು.

ثَانِيَ عِطْفِهِ لِيُضِلَّ عَن سَبِيلِ اللَّهِ ۖ
لَهُ فِي الدُّنْيَا خِزْيٌ ۖ وَنُذِيقُهُ يَوْمَ
الْقِيَامَةِ عَذَابَ الْحَرِيقِ ﴿٩﴾

10. ನಿನ್ನ ಸ್ವಂತ ಕೈಗಳು ನಿನಗಾಗಿ ಸಿದ್ಧಗೊಳಿಸಿರುವ ನಿನ್ನ ಭವಿಷ್ಯವಿದು. ಅನ್ಯಥಾ ಅಲ್ಲಾಹನು ತನ್ನ ದಾಸರ ಮೇಲೆ ಅಕ್ರಮವೆಸಗುವವನಲ್ಲ.

ذَٰلِكَ بِمَا قَدَّمَتْ يَدَاكَ وَأَنَّ اللَّهَ
لَيْسَ بِظَلَّامٍ لِّلْعَبِيدِ ﴿١٠﴾

11. ಗಡಿಯಲ್ಲಿದ್ದುಕೊಂಡು ಅಲ್ಲಾಹನ ದಾಸ್ಯ-ಆರಾಧನೆ ಮಾಡುವವನೂ ಜನರಲ್ಲಿದ್ದಾನೆ.[1] ಲಾಭವಾದರೆ ತೃಪ್ತನಾಗುತ್ತಾನೆ ಮತ್ತು ಏನಾದರೂ ಸಂಕಷ್ಟ ಬಂದರೆ ಹಿಂದಕ್ಕೆ ತಿರುಗಿ ಬಿಡುತ್ತಾನೆ. ಅವನ ಪಾಲಿಗೆ ಇಹಲೋಕವೂ ನಷ್ಟವಾಯಿತು, ಪರಲೋಕವೂ ನಷ್ಟವಾಯಿತು. ಇದುವೇ ಸುಸ್ಪಷ್ಟ ನಷ್ಟ.

وَمِنَ النَّاسِ مَنْ يَّعْبُدُ اللّٰهَ عَلٰى
حَرْفٍ ۚ فَاِنْ اَصَابَهٗ خَيْرُ ۨاطْمَاَنَّ
بِهٖ ۚ وَاِنْ اَصَابَتْهُ فِتْنَةُ ۨانْقَلَبَ
عَلٰى وَجْهِهٖ ۚ خَسِرَ الدُّنْيَا وَالْاٰخِرَةَ ۭ
ذٰلِكَ هُوَ الْخُسْرَانُ الْمُبِيْنُ ۱۱

12. ಅವನು ಅಲ್ಲಾಹನನ್ನು ಬಿಟ್ಟು ಅವನಿಗೆ ಹಾನಿಯನ್ನಾಗಲಿ, ಲಾಭವನ್ನಾಗಲಿ ಒದಗಿಸಲಾಗದಂತಹವರನ್ನು ಪ್ರಾರ್ಥಿಸುತ್ತಾನೆ, ಇದುವೇ ಪಥಭ್ರಷ್ಟತೆಯ ಪರಮಾವಧಿ.

يَدْعُوْا مِنْ دُوْنِ اللّٰهِ مَا لَا يَضُرُّهٗ وَ
مَا لَا يَنْفَعُهٗ ۭ ذٰلِكَ هُوَ الضَّلٰلُ الْبَعِيْدُ ۱۲

13. ಯಾರ ಹಾನಿಯು ಅವರ ಲಾಭಕ್ಕಿಂತ ಸಮೀಪವಿದೆಯೋ ಅವರನ್ನು ಅವನು ಪ್ರಾರ್ಥಿಸುತ್ತಾನೆ. ಅವನ ಸಂರಕ್ಷಕನು ಅತ್ಯಂತ ನಿಕೃಷ್ಟನು ಮತ್ತು ಅವನ ಮಿತ್ರನು ಅತ್ಯಂತ ನಿಕೃಷ್ಟನು.

يَدْعُوْا لَمَنْ ضَرُّهٗٓ اَقْرَبُ مِنْ نَّفْعِهٖ ۭ
لَبِئْسَ الْمَوْلٰى وَلَبِئْسَ الْعَشِيْرُ ۱۳

14. (ಇದಕ್ಕೆ ವ್ಯತಿರಿಕ್ತವಾಗಿ) ಸತ್ಯವಿಶ್ವಾಸವಿರಿಸಿಕೊಂಡು ಸತ್ಕರ್ಮವೆಸಗಿದವರನ್ನು ಖಂಡಿತವಾಗಿಯೂ ಅಲ್ಲಾಹನು ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವ ಸ್ವರ್ಗೋದ್ಯಾನಗಳಲ್ಲಿ ಪ್ರವೇಶಗೊಳಿಸುವನು. ಅಲ್ಲಾಹನು ತಾನಿಚ್ಛಿಸಿದುದನ್ನು ಮಾಡುತ್ತಾನೆ.

اِنَّ اللّٰهَ يُدْخِلُ الَّذِيْنَ اٰمَنُوْا وَعَمِلُوا
الصّٰلِحٰتِ جَنّٰتٍ تَجْرِيْ مِنْ تَحْتِهَا
الْاَنْهٰرُ ۭ اِنَّ اللّٰهَ يَفْعَلُ مَا يُرِيْدُ ۱۴

15. ಅಲ್ಲಾಹನು ಇಹ-ಪರಗಳಲ್ಲಿ ತನಗೇನೂ ಸಹಾಯ ಮಾಡಲಾರನೆಂದು ಭಾವಿಸಿಕೊಂಡವನು ಒಂದು ಹಗ್ಗದ ಮೂಲಕ ಆಕಾಶಕ್ಕೆ ತಲುಪಿ ಬಿರುಕನ್ನು ಉಂಟು ಮಾಡಲಿ. ಅನಂತರ ಅವನ ಪ್ರಯ ತ್ನವು ಅವನಿಗೆ ಹಿತಕರವಲ್ಲದ ವಿಷಯವನ್ನು ರದ್ದುಗೊಳಿಸುತ್ತದೋ ಎಂದು ನೋಡಿಕೊಳ್ಳಲಿ.

مَنْ كَانَ يَظُنُّ اَنْ لَّنْ يَّنْصُرَهُ اللّٰهُ
فِي الدُّنْيَا وَالْاٰخِرَةِ فَلْيَمْدُدْ بِسَبَبٍ
اِلَى السَّمَاۗءِ ثُمَّ لْيَقْطَعْ فَلْيَنْظُرْ هَلْ
يُذْهِبَنَّ كَيْدُهٗ مَا يَغِيْظُ ۱۵

16. ನಾವು ಈ ಕುರ್‌ಆನನ್ನು ಇಂತಹ ಸುಸ್ಪಷ್ಟವಾದ ಸೂಕ್ತಗಳೊಂದಿಗೆ ಅವತೀರ್ಣ ಗೊಳಿಸಿದ್ದೇವೆ ಮತ್ತು ಅಲ್ಲಾಹನು ತಾನಿಚ್ಛಿಸಿದವನಿಗೆ ಸನ್ಮಾರ್ಗದರ್ಶನವನ್ನು ನೀಡುತ್ತಾನೆ.

وَكَذٰلِكَ اَنْزَلْنٰهُ اٰيٰتٍۢ بَيِّنٰتٍ ۙ وَّاَنَّ اللّٰهَ
يَهْدِيْ مَنْ يُّرِيْدُ ۱۶

17. ನಿಶ್ಚಯವಾಗಿಯೂ ಸತ್ಯವಿಶ್ವಾಸವಿರಿಸಿದವರು, ಯಹೂದಿಗಳಾದವರು, ಸಾಬಿಈಗಳು, ನಸಾರಾಗಳು (ಕ್ರೈಸ್ತರು), ಮಜೂಸಿಗಳು (ಅಗ್ನಿ ಆರಾಧಕರು) ಮತ್ತು ಬಹುದೇವಾರಾಧಕರು ಇವರೆಲ್ಲರ ನಡುವೆ ಅಲ್ಲಾಹನು ಪುನರುತ್ಥಾನದ ದಿನ ತೀರ್ಮಾನ ಮಾಡಿಬಿಡುವನು. ಪ್ರತಿಯೊಂದು ವಿಷಯವೂ ಅಲ್ಲಾಹನ ದೃಷ್ಟಿಯಲ್ಲಿದೆ.

اِنَّ الَّذِيْنَ اٰمَنُوْا وَالَّذِيْنَ هَادُوْا
وَالصّٰبِـِٕيْنَ وَالنَّصٰرٰى وَالْمَجُوْسَ وَالَّذِيْنَ
اَشْرَكُوْٓا ڰ اِنَّ اللّٰهَ يَفْصِلُ بَيْنَهُمْ يَوْمَ الْقِيٰمَةِ ۭ
اِنَّ اللّٰهَ عَلٰى كُلِّ شَيْءٍ شَهِيْدٌ ۱۷

1. ಅರ್ಥಾತ್- ಸತ್ಯನಿಷೇಧ ಮತ್ತು ಇಸ್ಲಾಮಿನ ಸರಹದ್ದಿನಲ್ಲಿ ನಿಂತುಕೊಂಡು ದಾಸ್ಯ ಕೈಗೊಳ್ಳುತ್ತಾನೆ. ಅವನ ಸ್ಥಿತಿ ಜಯ ದೊರೆತರೆ ಜತೆ ಸೇರುವ ಮತ್ತು ಸೋಲುಂಟಾದರೆ ಮೆಲ್ಲನೆ ಸರಿದು ಬಿಡುವ ಸೇನೆಯ ಬದಿಯಲ್ಲಿ ನಿಂತ ಗೊಂದಲದಲ್ಲಿರುವ ವ್ಯಕ್ತಿಯಂತಿದೆ.

18. ಆಕಾಶಗಳಲ್ಲಿಯೂ ಭೂಮಿಯಲ್ಲಿಯೂ ಇರುವ ಸಕಲವೂ ಸೂರ್ಯ ಚಂದ್ರ ನಕ್ಷತ್ರಗಳೂ ಪರ್ವತಗಳೂ ಮರಗಳೂ ಪ್ರಾಣಿಗಳೂ ಅನೇಕ ಮನುಷ್ಯರೂ ಯಾತನೆಗೆ ಅರ್ಹರಾಗಿರುವ ಅನೇಕರೂ ಅಲ್ಲಾಹನ ಮುಂದೆ ಸಾಷ್ಟಾಂಗ ವೆರಗುತ್ತಿರುವುದನ್ನು ನೀವು ನೋಡುತ್ತಿಲ್ಲವೇ? ಯಾರನ್ನು ಅಲ್ಲಾಹ್ ಅವಮಾನಗೊಳಿಸಿ ಬಿಡುವನೋ ಅವನನ್ನು ಬೇರೆ ಯಾರೂ ಗೌರವಿಸುವವರಿಲ್ಲ. ಅಲ್ಲಾಹ್ ತಾನಿಚ್ಛಿಸಿದ್ದನ್ನೇ ಮಾಡುತ್ತಾನೆ.

أَلَمْ تَرَ أَنَّ اللّٰهَ يَسْجُدُ لَهُ مَنْ فِي
السَّمٰوٰتِ وَمَنْ فِي الْأَرْضِ وَالشَّمْسُ
وَالْقَمَرُ وَالنُّجُومُ وَالْجِبَالُ وَالشَّجَرُ
وَالدَّوَآبُّ وَكَثِيرٌ مِّنَ النَّاسِ ۖ وَ
كَثِيرٌ حَقَّ عَلَيْهِ الْعَذَابُ ۗ وَمَنْ
يُّهِنِ اللّٰهُ فَمَا لَهُ مِنْ مُّكْرِمٍ ۗ إِنَّ
اللّٰهَ يَفْعَلُ مَا يَشَآءُ ۩ ﴿١٨﴾

19. ತಮ್ಮ ಪ್ರಭುವಿನ ವಿಷಯದಲ್ಲಿ ಪರಸ್ಪರ ಕಲಹವಿರುವ ಎರಡು ಪಂಗಡಗಳಿವು[2]. ಇವರಲ್ಲಿ ಸತ್ಯನಿಷೇಧಿಗಳಿಗೆ ನರಕಾಗ್ನಿಯ ಉಡುಪು ಕತ್ತರಿಸಲ್ಪಟ್ಟಿದೆ. ಅವರ ತಲೆಗಳ ಮೇಲೆ ಕುದಿಯುವ ನೀರನ್ನು ಸುರಿಸಲಾಗುವುದು.

هٰذٰنِ خَصْمٰنِ اخْتَصَمُوا فِي رَبِّهِمْ ۫
فَالَّذِينَ كَفَرُوا قُطِّعَتْ لَهُمْ ثِيَابٌ
مِّنْ نَّارٍ ۗ يُصَبُّ مِنْ فَوْقِ رُءُوسِهِمُ
الْحَمِيمُ ﴿١٩﴾

20. ಅದರಿಂದ ಅವರ ಚರ್ಮಗಳು ಮಾತ್ರವಲ್ಲ ಹೊಟ್ಟೆಯೊಳಗಿರುವ ಭಾಗಗಳೂ ಕರಗಿ ಹೋಗುವುವು-

يُصْهَرُ بِهِ مَا فِي بُطُونِهِمْ وَالْجُلُودُ ﴿٢٠﴾

21. ಮತ್ತು ಅವರನ್ನು ಶಿಕ್ಷಿಸಲಿಕ್ಕಾಗಿ ಕಬ್ಬಿಣದ ಗದೆಗಳಿರುವುವು.

وَلَهُمْ مَّقَامِعُ مِنْ حَدِيدٍ ﴿٢١﴾

22. ಅವರು ಭಯಭೀತರಾಗಿ ನರಕದಿಂದ ಹೊರ ಹೋಗಿ ಬಿಡಲು ಪ್ರಯತ್ನಿಸಿದಾಗಲೆಲ್ಲ ಸುಡುವ ಶಿಕ್ಷೆಯ ರುಚಿಯನ್ನು ಸವಿಯಿರಿ ಎನ್ನುತ್ತ ಪುನಃ ಅದರೊಳಗೇ ದೂಡಲ್ಪಡುವರು.

كُلَّمَا أَرَادُوا أَنْ يَّخْرُجُوا مِنْهَا مِنْ
غَمٍّ أُعِيدُوا فِيهَا ۚ وَذُوقُوا
عَذَابَ الْحَرِيقِ ﴿٢٢﴾

23. (ಇನ್ನೊಂದು ಕಡೆ) ಅಲ್ಲಾಹನು ಸತ್ಯವಿಶ್ವಾಸವಿರಿಸಿದವರನ್ನು ಮತ್ತು ಸತ್ಕರ್ಮವೆಸಗಿದವರನ್ನು ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವ ಸ್ವರ್ಗೋದ್ಯಾನಗಳಲ್ಲಿ ಪ್ರವೇಶಗೊಳಿಸುವನು. ಅಲ್ಲಿ ಅವರು ಚಿನ್ನದ ಕಂಕಣಗಳಿಂದಲೂ ಮುತ್ತುಗಳಿಂದಲೂ ಅಲಂಕರಿಸಲ್ಪಡುವರು. ಅವರ ಉಡುಪು ರೇಶ್ಮೆಯದ್ದಾಗಿರುವುದು.

إِنَّ اللّٰهَ يُدْخِلُ الَّذِينَ آمَنُوا وَ
عَمِلُوا الصّٰلِحٰتِ جَنّٰتٍ تَجْرِي مِنْ
تَحْتِهَا الْأَنْهٰرُ يُحَلَّوْنَ فِيهَا مِنْ
أَسَاوِرَ مِنْ ذَهَبٍ وَّلُؤْلُؤًا ۗ وَلِبَاسُهُمْ
فِيهَا حَرِيرٌ ﴿٢٣﴾

2. ಇಲ್ಲಿ ದೇವನ ಬಗ್ಗೆ ಜಗಳ ಕಾಯುತ್ತಿರುವ ಎಲ್ಲಾ ಗುಂಪುಗಳನ್ನು ಅವುಗಳ ಸಂಖ್ಯಾಧಿಕ್ಯದ ಹೊರತಾಗಿಯೂ ಎರಡು ಪಂಗಡಗಳು ಎಂದು ಹೇಳಲಾಗಿದೆ. ಪ್ರವಾದಿಗಳ ಮಾತನ್ನು ನಂಬಿ ನಿಜಾರ್ಥದಲ್ಲಿ ದೇವನ ಅನುಸರಣೆ ಮಾಡುವ ಒಂದು ಪಂಗಡ. ಪ್ರವಾದಿಗಳ ಮಾತನ್ನು ನಂಬದೆ ಸತ್ಯನಿಷೇಧದಲ್ಲಿ ತೊಡಗಿರುವವರನ್ನೊಳಗೊಂಡ ಇನ್ನೊಂದು ಪಂಗಡ. ಅವರ ನಡುವೆ ಎಷ್ಟೇ ವ್ಯತ್ಯಾಸಗಳಿದ್ದರೂ ಅವರು ಸತ್ಯನಿಷೇಧದ ಎಂತಹ ವಿಭಿನ್ನ ಪ್ರಕಾರಗಳನ್ನು ಅಳವಡಿಸಿಕೊಂಡವರಾಗಿದ್ದರೂ ಅವರು ಅದೇ ಪಂಗಡಕ್ಕೆ ಸೇರಿದವರಾಗಿದ್ದಾರೆ.

24. ಅವರಿಗೆ ಪರಿಶುದ್ಧ ಮಾತನ್ನು ಸ್ವೀಕರಿಸುವಂತಹ ಮಾರ್ಗದರ್ಶನ ನೀಡಲಾಯಿತು ಮತ್ತು ಅವರಿಗೆ ಸ್ತುತ್ಯರ್ಹನಾದವನ ಮಾರ್ಗವನ್ನು ತೋರಿಸಲಾಯಿತು.

وَهُدُوْٓا اِلَى الطَّيِّبِ مِنَ الْقَوْلِ ۚۖ وَ
هُدُوْٓا اِلٰى صِرَاطِ الْحَمِيْدِ ﴿٢٤﴾

25. ಸತ್ಯನಿಷೇಧ ಕೈಗೊಂಡವರು, (ಇಂದು) ಅಲ್ಲಾಹನ ಮಾರ್ಗದಿಂದ ಮತ್ತು ನಾವು ಸಕಲ ಮಾನವರಿಗಾಗಿ ಮಾಡಿರುವ, ಸ್ಥಳೀಯರ ಹಾಗೂ ಹೊರಗಿನಿಂದ ಬರುವವರ ಹಕ್ಕುಗಳು ಸರಿಸಮಾನವಾಗಿ ರುವ ಮಸ್ಜಿದುಲ್ ಹರಾಮ್‌ನ ಸಂದರ್ಶನದಿಂದ ಜನರನ್ನು ತಡೆಯುತ್ತಿರುವವರು.[3] (ಅವರ ವರ್ತನೆಯು ಖಂಡಿತವಾಗಿಯೂ ಶಿಕ್ಷಾರ್ಹವಾಗಿದೆ) ಇದರಲ್ಲಿ (ಮಸ್ಜಿದುಲ್ ಹರಾಮ್)ನಲ್ಲಿ ಸತ್ಯದಿಂದ ದೂರ ಸರಿದು ಅಕ್ರಮ ಮಾರ್ಗ ಕೈಗೊಂಡವನು ಯಾರೇ ಇರಲಿ, ಅವನಿಗೆ ನಾವು ವೇದನಾಯುಕ್ತ ಯಾತನೆಯ ರುಚಿಯನ್ನು ಸವಿಸುವೆವು.

اِنَّ الَّذِيْنَ كَفَرُوْا وَيَصُدُّوْنَ عَنْ سَبِيْلِ
اللّٰهِ وَالْمَسْجِدِ الْحَرَامِ الَّذِيْ جَعَلْنٰهُ
لِلنَّاسِ سَوَآءَ ۨ الْعَاكِفُ فِيْهِ وَالْبَادِ ۗ
وَمَنْ يُّرِدْ فِيْهِ بِاِلْحَادٍۢ بِظُلْمٍ نُّذِقْهُ
مِنْ عَذَابٍ اَلِيْمٍ ﴿٢٥﴾ ٣ ع٣ ١٠

26. ನಾವು ಇಬ್‌ರಾಹೀಮರಿಗೆ ಈ ಭವನ(ಕಅಬಾ)ದ ಸ್ಥಳವನ್ನು ಗೊತ್ತುಪಡಿಸಿ ಕೊಟ್ಟ ಸಂದರ್ಭವನ್ನು ಸ್ಮರಿಸಿರಿ. (ಅವರಿಗೆ ಹೀಗೆ ಆದೇಶಿಸಲಾಗಿತ್ತು;) "ನನ್ನ ಜೊತೆ ಯಾವುದೇ ವಸ್ತುವನ್ನೂ ಸಹಭಾಗಿಯಾಗಿ ಮಾಡದಿರಿ. ನನ್ನ ಭವನವನ್ನು ಪ್ರದಕ್ಷಿಣೆ ಮಾಡುವವರಿಗಾಗಿಯೂ (ನಮಾಝಿಗೆ) ನಿಲ್ಲುವವರಿಗಾಗಿಯೂ ಬಾಗುವವರಿಗಾಗಿಯೂ ಸಾಷ್ಟಾಂಗ ಮಾಡುವವರಿಗಾಗಿಯೂ ನಿರ್ಮಲವಾಗಿರಿಸಿರಿ-

وَاِذْ بَوَّاْنَا لِاِبْرٰهِيْمَ مَكَانَ الْبَيْتِ
اَنْ لَّا تُشْرِكْ بِيْ شَيْـًٔا وَّطَهِّرْ بَيْتِيَ
لِلطَّآئِفِيْنَ وَالْقَآئِمِيْنَ وَالرُّكَّعِ السُّجُوْدِ ﴿٢٦﴾

27. ಮತ್ತು ಜನರಿಗೆ ಹಜ್ಜ್ ಯಾತ್ರೆಗಾಗಿ ಸಾರ್ವತ್ರಿಕ ಕರೆ ನೀಡಿರಿ. ಅವರು ದೂರ ದೂರದ ಪ್ರದೇಶಗಳಿಂದೆಲ್ಲ ಕಾಲ್ನಡಿಗೆಯಲ್ಲೂ ಒಂಟೆಗಳ ಮೇಲೆ ಸವಾರಿ ಮಾಡಿಕೊಂಡೂ ನಿಮ್ಮ ಬಳಿಗೆ ಬರುವಂತಾಗಲಿ."

وَاَذِّنْ فِي النَّاسِ بِالْحَجِّ يَاْتُوْكَ رِجَالًا
وَّعَلٰى كُلِّ ضَامِرٍ يَّاْتِيْنَ مِنْ كُلِّ
فَجٍّ عَمِيْقٍ ﴿٢٧﴾

28. (ಈ ರೀತಿ) ಅವರು ಇಲ್ಲಿ ಅವರಿಗಾಗಿ ಇರಿಸಲಾಗಿರುವ ಪ್ರಯೋಜನಗಳನ್ನು ಪ್ರತ್ಯಕ್ಷವಾಗಿ ನೋಡುವಂತಾಗಲಿ ಮತ್ತು ಅವರು ಕೆಲವು ನಿಶ್ಚಿತ ದಿನಗಳಲ್ಲಿ ಅಲ್ಲಾಹನು ಅವರಿಗೆ ದಯಪಾಲಿಸಿರುವ ಜಾನುವಾರುಗಳ ಮೇಲೆ ಅವನ ನಾಮವನ್ನುಚ್ಚರಿಸಲಿ. ಸ್ವತಃ ತಿನ್ನಲಿ ಮತ್ತು ಬಡ ಬಗ್ಗರಿಗೂ ಕೊಡಲಿ.

لِّيَشْهَدُوْا مَنَافِعَ لَهُمْ وَيَذْكُرُوا
اسْمَ اللّٰهِ فِيْٓ اَيَّامٍ مَّعْلُوْمٰتٍ عَلٰى مَا
رَزَقَهُمْ مِّنْۢ بَهِيْمَةِ الْاَنْعَامِ ۚ فَكُلُوْا
مِنْهَا وَاَطْعِمُوا الْبَآئِسَ الْفَقِيْرَ ﴿٢٨﴾

3. ಅರ್ಥಾತ್- ಪ್ರವಾದಿವರ್ಯರು(ಸ) ಮತ್ತು ಅವರ ಅನುಯಾಯಿಗಳನ್ನು ಅವರು ಹಜ್ಜ್ ಮತ್ತು ಉಮ್ರಾಗಳಿಂದ ತಡೆಯುತ್ತಿದ್ದಾರೆ.

29. ಆ ಬಳಿಕ ತಮ್ಮ ಕೊಳೆ-ಕಶ್ಮಲಗಳನ್ನು ಹೋಗಲಾಡಿಸಲಿ. ತಮ್ಮ ಹರಕೆಗಳನ್ನು ಸಲ್ಲಿಸಲಿ ಮತ್ತು ಈ ಪುರಾತನ ಭವನಕ್ಕೆ ಪ್ರದಕ್ಷಿಣೆ ಮಾಡಲಿ.

ثُمَّ لْيَقْضُوا تَفَثَهُمْ وَلْيُوفُوا نُذُورَهُمْ
وَلْيَطَّوَّفُوا بِالْبَيْتِ الْعَتِيقِ ٢٩

30. (ಕಅಬಾ ನಿರ್ಮಾಣದ ಉದ್ದೇಶ) ಇದಾಗಿತ್ತು ಮತ್ತು ಅಲ್ಲಾಹ ನಿಂದ ನಿಶ್ಚಯಿಸಲ್ಪಟ್ಟ ಕರ್ಮವಿಧಿಗಳನ್ನು ಯಾರಾದರೂ ಗೌರವಿಸಿ ದರೆ ಅದು ಅವನ ಪ್ರಭುವಿನ ಬಳಿ ಸ್ವತಃ ಅವನಿಗೇ ಉತ್ತಮ ವಾಗಿರುವುದು. ಜಾನುವಾರುಗಳನ್ನು ನಿಮ್ಮ ಪಾಲಿಗೆ 'ಧರ್ಮ ಸಮ್ಮತ'ಗೊಳಿಸಲಾಗಿದೆ.[4] ಆದರೆ ನಿಮಗೆ ಸೂಚಿಸಲಾಗಿರುವವುಗಳ ಹೊರತು. ನೀವಿನ್ನು ವಿಗ್ರಹಗಳ ಮಾಲಿನ್ಯದಿಂದ ದೂರವಿರಿ. ಅಸತ್ಯ ಮಾತುಗಳಿಂದಲೂ ದೂರವಿರಿ.

ذَٰلِكَ وَمَن يُعَظِّمْ حُرُمَاتِ اللَّهِ فَهُوَ
خَيْرٌ لَّهُ عِندَ رَبِّهِ ۗ وَأُحِلَّتْ لَكُمُ
الْأَنْعَامُ إِلَّا مَا يُتْلَىٰ عَلَيْكُمْ ۖ فَاجْتَنِبُوا
الرِّجْسَ مِنَ الْأَوْثَانِ وَاجْتَنِبُوا قَوْلَ الزُّورِ ٣٠

31. ಏಕನಿಷ್ಠರಾಗಿ ಅಲ್ಲಾಹನ ದಾಸರಾಗಿರಿ. ಅವನೊಂದಿಗೆ ಯಾರನ್ನೂ ಭಾಗೀದಾರನಾಗಿ ಮಾಡಬೇಡಿರಿ. ಅಲ್ಲಾಹನೊಂದಿಗೆ ಸಹಭಾಗಿತ್ವ ಎಸಗುವವನು ಆಕಾಶದಿಂದ ಕೆಳಗೆ ಬಿದ್ದಂತೆ. ಆಗ ಅವನನ್ನು ಒಂದೋ ಪಕ್ಷಿಗಳು ಕಿತ್ತುಕೊಂಡು ಹೋಗುವುವು ಅಥವಾ ಗಾಳಿಯು ಅವನನ್ನು ಒಯ್ದು, ಅವನು ನುಚ್ಚುನೂರಾಗಿ ಬಿಡು ವಂತಹ ಸ್ಥಳಕ್ಕೆ ಅಪ್ಪಳಿಸಿ ಬಿಡುವುದು.[5]

حُنَفَاءَ لِلَّهِ غَيْرَ مُشْرِكِينَ بِهِ ۚ وَمَن
يُشْرِكْ بِاللَّهِ فَكَأَنَّمَا خَرَّ مِنَ السَّمَاءِ
فَتَخْطَفُهُ الطَّيْرُ أَوْ تَهْوِي بِهِ الرِّيحُ
فِي مَكَانٍ سَحِيقٍ ٣١

32. ಇದಾಗಿದೆ ವಾಸ್ತವಿಕ ವಿಷಯ. (ಇದನ್ನು ತಿಳಿದುಕೊಳ್ಳಿರಿ) ಮತ್ತು ಯಾರಾದರೂ ಅಲ್ಲಾಹನು ನಿಶ್ಚಯಿಸಿದ ಲಾಂಛನಗಳನ್ನು ಗೌರವಿಸಿದರೆ ಇದು ಹೃದಯಗಳ 'ಭಕ್ತಿ'ಯಿಂದಾಗಿದೆ.[6]

ذَٰلِكَ وَمَن يُعَظِّمْ شَعَائِرَ اللَّهِ فَإِنَّهَا
مِن تَقْوَى الْقُلُوبِ ٣٢

4. ಈ ಸಂದರ್ಭದಲ್ಲಿ ಜಾನುವಾರುಗಳನ್ನು ಧರ್ಮಸಮ್ಮತಗೊಳಿಸಲಾಗಿರುವುದನ್ನು ಪ್ರಸ್ತಾವಿಸುವುದರ ಉದ್ದೇಶ, ಎರಡು ತಪ್ಪುಕಲ್ಪನೆಗಳನ್ನು ದೂರ ಮಾಡುವುದಾಗಿದೆ. ಮೊದಲನೆಯದಾಗಿ ಮುಶ್ರಿಕರು ಮತ್ತು ಕುರೈಶರು ಬಹೀರಃ, ಸಾಯಿಬಾ, ವಸೀಲ ಮತ್ತು ಹಾಮ್‌ಗಳೂ ಅಲ್ಲಾಹನು ಗೊತ್ತುಪಡಿಸಿದ ನಿಷೇಧಗಳೇ ಆಗಿವೆ ಎಂದು ಭಾವಿಸುತ್ತಿದ್ದರು. ಆದ್ದರಿಂದ ಇವಾವುದೂ ಅಲ್ಲಾಹನು ವಿಧಿಸಿದ ನಿಷೇಧಗಳಲ್ಲ. ಆ ಜಾನುವಾರುಗಳೆಲ್ಲವೂ ನಿಮ್ಮ ಪಾಲಿಗೆ ಧರ್ಮಸಮ್ಮತವೆಂದು ಹೇಳಲಾಗಿದೆ. ಎರಡನೆಯದಾಗಿ ಇಹ್ರಾಮ್ ಧರಿಸಿರುವ ಸ್ಥಿತಿಯಲ್ಲಿ ಬೇಟೆಯಾಡುವುದು ನಿಷಿದ್ಧವಾಗಿರುವುದರಿಂದ ಜಾನುವಾರುಗಳನ್ನು ದಿಬಹ್ ಮಾಡುವುದು ಮತ್ತು ಸೇವಿಸುವುದು ಕೂಡ ನಿಷಿದ್ಧವೆಂದು ಯಾರೂ ಭಾವಿಸಬಾರದು. ಅದಕ್ಕಾಗಿ ಇವಾವುದೂ ಅಲ್ಲಾಹನು ಗೊತ್ತುಪಡಿಸಿದ ನಿಷೇಧಗಳಲ್ಲಿ ಸೇರಿಲ್ಲವೆಂದು ಹೇಳಲಾಗುತ್ತಿದೆ.

5. ಈ ಉದಾಹರಣೆಯಲ್ಲಿ ಆಕಾಶವೆಂದು ಹೇಳಲಾಗಿರುವುದು ಮಾನವನ ನೈಸರ್ಗಿಕ ಅವಸ್ಥೆಯ ಕುರಿತಾಗಿದೆ. ಅವನು ನೈಸರ್ಗಿಕವಾಗಿ ದೇವನ ಹೊರತು ಬೇರಾರ ದಾಸನೂ ಆಗಿರುವುದಿಲ್ಲ. ಅವನ ಪ್ರಕೃತಿ ಏಕದೇವತ್ವವಲ್ಲದೆ ಬೇರಾವ ಧರ್ಮವನ್ನೂ ಅರಿಯದು. ಮಾನವನು ಪ್ರವಾದಿಗಳ ಮಾರ್ಗದರ್ಶನವನ್ನು ಸ್ವೀಕರಿಸಿದರೆ ಅವನು ತನ್ನ ಜ್ಞಾನ ಮತ್ತು ಅಂತರ್ದೃಷ್ಟಿಯೊಂದಿಗೆ ಆ ನೈಸರ್ಗಿಕ ಅವಸ್ಥೆಯಲ್ಲೇ ನೆಲೆಗೊಳ್ಳುತ್ತಾನೆ. ಅನಂತರ ಅವನು ಉನ್ನತಿಯೆಡೆಗೇ ಸಾಗುತ್ತಾನೆ, ಪತನದ ಕಡೆಗಲ್ಲ. ಆದರೆ ಬಹುದೇವಾರಾಧನೆ ಮತ್ತು ನಾಸ್ತಿಕತೆಯನ್ನು ಅಳವಡಿಸಿಕೊಂಡ ತಕ್ಷಣ ಅವನು ತನ್ನ ಪ್ರಕೃತಿಯೆಂಬ ಆಗಸದಿಂದ ಹಠಾತ್ತನೆ ಬಿದ್ದು ಬಿಡುತ್ತಾನೆ. ಅನಂತರ ಅವನು ಖಂಡಿತವಾಗಿ ಈ ಕೆಳಗಿನ ಎರಡು ಪರಿಸ್ಥಿತಿಯಲ್ಲೊಂದನ್ನು ಎದುರಿಸುತ್ತಾನೆ. ಒಂದೋ ಪಿಶಾಚಿಗಳು ಮತ್ತು ಪಥಭ್ರಷ್ಟಗೊಳಿಸುವ ಮಾನವರು ಅವನ ಮೇಲೆ ಮುಗಿ ಬೀಳುತ್ತಾರೆ. ಪ್ರತಿಯೊಬ್ಬರೂ ಅವನನ್ನು ಕುಕ್ಕಿ ಕೊಂಡೊಯ್ಯಲು ಪ್ರಯತ್ನಿಸುತ್ತಾರೆ. ಇಲ್ಲವೇ ಅವನ ಸ್ವೇಚ್ಛೆ, ಭಾವನೆಗಳು ಮತ್ತು ಕಲ್ಪನೆಗಳು ಅವನನ್ನು ಯಾವ್ಯಾವುದೋ ಭ್ರಾಮಕ ಜಗತ್ತಿಗೆ ಕೊಂಡೊಯ್ದು ಕೊನೆಗೆ ಯಾವುದಾದರೊಂದು ಕಂದರದಲ್ಲಿ ಎಸೆದು ಬಿಡುತ್ತವೆ.

6. ಅರ್ಥಾತ್- ಈ ಗೌರವ ಹೃದಯದಲ್ಲಿರುವ ದೇವಭಯದ ಪರಿಣಾಮವಾಗಿದೆ. ಅವನ ಮನಸ್ಸಿನಲ್ಲಿ ಕಿಂಚಿತ್ತಾದರೂ ದೇವಭಯ ಇದೆ

33. ನಿಮಗೆ ಒಂದು ನಿಶ್ಚಿತ ಕಾಲದ ವರೆಗೆ (ಬಲಿ ಮೃಗಗಳಿಂದ) ಪ್ರಯೋಜನ ಪಡೆಯುವ ಹಕ್ಕಿದೆ.[7] ಅನಂತರ ಅವುಗಳನ್ನು ಬಲಿ ದಾನ ಮಾಡುವ ಸ್ಥಾನವು ಅದೇ ಪುರಾತನ ಭವನದ ಸಮೀಪವಿದೆ.

لَكُمْ فِيهَا مَنَافِعُ إِلَىٰ أَجَلٍ مُسَمًّى ثُمَّ
مَحِلُّهَا إِلَى الْبَيْتِ الْعَتِيقِ ﴿٣٣﴾

34. ನಾವು ಪ್ರತಿಯೊಂದು ಸಮುದಾಯಕ್ಕೆ ಬಲಿದಾನದ ಒಂದು ಕಾಯಿದೆಯನ್ನು ನಿಶ್ಚಯಿಸಿ ಕೊಟ್ಟಿದ್ದೇವೆ. ಇದು, (ಆ ಸಮುದಾಯದ) ಜನರು ತಮಗೆ ಅಲ್ಲಾಹನು ದಯಪಾಲಿಸಿರುವ ಪ್ರಾಣಿಗಳ ಮೇಲೆ ಅಲ್ಲಾಹನ ನಾಮವನ್ನು ಉಚ್ಚರಿಸಲೆಂದು.[8] (ಈ ವಿವಿಧ ಕ್ರಮಗಳಲ್ಲಿರುವ ಉದ್ದೇಶವು ಒಂದೇ). ನಿಮ್ಮ ದೇವನಂತು ಏಕಮಾತ್ರ ದೇವನು. ಆದುದರಿಂದ ನೀವು ಅವನ ಆಜ್ಞಾಪಾಲಕ ರಾಗಿಯೇ ಇರಿ. ಪೈಗಂಬರರೇ, ವಿನಯಶೀಲರಿಗೆ ಶುಭವಾರ್ತೆ ನೀಡಿರಿ.

وَلِكُلِّ أُمَّةٍ جَعَلْنَا مَنسَكًا لِيَذْكُرُوا
اسْمَ اللَّهِ عَلَىٰ مَا رَزَقَهُم مِّن بَهِيمَةِ
الْأَنْعَامِ ۗ فَإِلَٰهُكُمْ إِلَٰهٌ وَاحِدٌ فَلَهُ
أَسْلِمُوا ۗ وَبَشِّرِ الْمُخْبِتِينَ ﴿٣٤﴾

35. ಅಲ್ಲಾಹನ ಪ್ರಸ್ತಾಪವನ್ನು ಕೇಳಿದೊಡನೆ ಅವರ ಹೃದಯಗಳು ಕಂಪಿಸತೊಡಗುತ್ತವೆ. ಅವರ ಮೇಲೆ ಯಾವ ಸಂಕಷ್ಟಗಳು ಬಂದರೂ ತಾಳ್ಮೆ ವಹಿಸುತ್ತಾರೆ, ನಮಾಝನ್ನು ಸಂಸ್ಥಾಪಿಸುತ್ತಾರೆ ಮತ್ತು ನಾವು ಅವರಿಗೆ ನೀಡಿದ ಜೀವನಾಧಾರದಿಂದ ವ್ಯಯಿಸುತ್ತಾರೆ.

الَّذِينَ إِذَا ذُكِرَ اللَّهُ وَجِلَتْ قُلُوبُهُمْ
وَالصَّابِرِينَ عَلَىٰ مَا أَصَابَهُمْ وَالْمُقِيمِي
الصَّلَاةِ وَمِمَّا رَزَقْنَاهُمْ يُنفِقُونَ ﴿٣٥﴾

36. ನಾವು (ಬಲಿದಾನದ) ಒಂಟೆಗಳನ್ನು ನಿಮಗಾಗಿ ಅಲ್ಲಾಹನ ಲಾಂಛನಗಳಾಗಿ ಮಾಡಿದ್ದೇವೆ. ನಿಮಗೆ ಅವುಗಳಲ್ಲಿ ಒಳಿತಿದೆ, ಆದುದರಿಂದ ಅವುಗಳನ್ನು ನಿಲ್ಲಿಸಿ ಅವುಗಳ ಮೇಲೆ ಅಲ್ಲಾಹನ ನಾಮವನ್ನು ಉಚ್ಚರಿಸಿರಿ[9] ಮತ್ತು (ಬಲಿಯರ್ಪಿಸಿದ ಬಳಿಕ)

وَالْبُدْنَ جَعَلْنَاهَا لَكُم مِّن شَعَائِرِ اللَّهِ
لَكُمْ فِيهَا خَيْرٌ ۖ فَاذْكُرُوا اسْمَ اللَّهِ
عَلَيْهَا صَوَافَّ ۖ فَإِذَا وَجَبَتْ جُنُوبُهَا

ಎಂಬುದನ್ನು ಅದು ಸೂಚಿಸುತ್ತದೆ. ಅನ್ಯಥಾ ಅವನು ದೇವನ ಲಾಂಛನಗಳನ್ನು ಗೌರವಿಸಲು ಸಾಧ್ಯವಿರಲಿಲ್ಲ.

7. ಮೊದಲನೆಯ ಸೂಕ್ತದಲ್ಲಿ ಅಲ್ಲಾಹನ ಲಾಂಛನಗಳನ್ನು ಗೌರವಿಸುವ ಆದೇಶ ನೀಡಿದ ಬಳಿಕ ತಪ್ಪುಕಲ್ಪನೆಯೊಂದನ್ನು ನೀಗಿಸಲಿಕ್ಕಾಗಿ ಈ ಮಾತು ಹೇಳಲಾಗಿದೆ. ಅಲ್ಲಾಹನ ಲಾಂಛನಗಳಲ್ಲಿ ಬಲಿಯರ್ಪಿಸಲಿಕ್ಕಾಗಿ ಇರುವ ಜಾನುವಾರುಗಳೂ ಸೇರಿವೆ. ಅವುಗಳನ್ನು ಅಲ್ಲಾಹನ ಭವನದತ್ತ ಕೊಂಡೊಯ್ಯುವಾಗ ಅವುಗಳ ಮೇಲೆ ಸವಾರಿ ನಡೆಸಬಾರದು, ಸಾಮಾನು ಹೊರಿಸ ಬಾರದು, ಹಾಲು ಕರೆಯಬಾರದು ಎಂದು ಅರಬರು ಭಾವಿಸಿದ್ದರು. ಆದ್ದರಿಂದ ಆ ತಪ್ಪುಕಲ್ಪನೆಯನ್ನು ನೀಗಿಸಲಿಕ್ಕಾಗಿ ಅವುಗಳಿಂದ ಅಗತ್ಯಬಿದ್ದರೆ ಪ್ರಯೋಜನ ಪಡೆಯಬಹುದು ಎಂದು ಹೇಳಲಾಗುತ್ತಿದೆ.

8. ಈ ಸೂಕ್ತದಿಂದ ಎರಡು ವಿಷಯಗಳು ತಿಳಿದು ಬರುತ್ತವೆ. ಮೊದಲನೆಯದಾಗಿ ಪ್ರಾಣಿಬಲಿ ಎಲ್ಲಾ ದಿವ್ಯ ಶರೀಅತ್‌ನ ಆರಾಧನಾ ಪದ್ಧತಿಯ ಭಾಗವಾಗಿತ್ತು. ಎರಡನೆಯದಾಗಿ ಅಲ್ಲಾಹನ ಹೆಸರಲ್ಲಿ ಮಾಡಲಾಗುವ ಪ್ರಾಣಿ ಬಲಿ ಎಲ್ಲಾ ಶರೀಅತ್‌ಗಳಲ್ಲಿ ಸಮಾನ ರೂಪದಲ್ಲಿತ್ತು. ಇನ್ನು ಅದರ ಸಂದರ್ಭ, ಸಮಯ ಮತ್ತಿತರ ವಿವರಗಳ ಬಗ್ಗೆ ವಿವಿಧ ಕಾಲದ ಶರೀಅತ್‌ನಲ್ಲಿ ವಿಭಿನ್ನ ಆದೇಶಗಳಿದ್ದುವು.

9. ಅವುಗಳ ಮೇಲೆ ಅಲ್ಲಾಹನ ನಾಮವನ್ನು ಉಚ್ಚರಿಸುವುದೆಂದರೆ ಅವುಗಳನ್ನು ದಿಬಃ ಮಾಡುವಾಗ ಅಲ್ಲಾಹನ ಹೆಸರೆತ್ತುವುದಾಗಿದೆ. ಒಂಟೆಯನ್ನು ಮೊದಲು ನಿಲ್ಲಿಸಿ ಅದರ ಕೊರಳಿಗೆ ಭರ್ಜಿಯಿಂದ ತಿವಿಯಲಾಗುತ್ತದೆ. ಇದನ್ನು 'ನಹ್ರ್' ಮಾಡುವುದು ಎನ್ನುತ್ತಾರೆ.

ಅವುಗಳ ಬೆನ್ನುಗಳು ನೆಲಕ್ಕೆ ತಾಗಿದ ಮೇಲೆ[10] ಅವುಗಳಿಂದ ಸ್ವತಃ ತಿನ್ನಿರಿ ಹಾಗೂ(ಇದ್ದುದರಲ್ಲಿ) ಸಂತೃಪ್ತಿ ಪಡುವವರಿಗೂ ಅಪೇಕ್ಷೆ ಪ್ರಕಟಿಸುವವರಿಗೂ ತಿನ್ನಿಸಿರಿ. ನೀವು ಕೃತಜ್ಞರಾಗಲಿಕ್ಕಾಗಿ ನಾವು ಈ ರೀತಿಯಲ್ಲಿ ನಿಮಗಾಗಿ ಆ ಪ್ರಾಣಿಗಳನ್ನು ನಿಯಂತ್ರಿಸಿ ಕೊಟ್ಟಿದ್ದೇವೆ.

فَكُلُوا مِنْهَا وَأَطْعِمُوا الْقَانِعَ وَالْمُعْتَرَّ ۚ
كَذَٰلِكَ سَخَّرْنَاهَا لَكُمْ لَعَلَّكُمْ تَشْكُرُونَ ٣٦

37. ಅವುಗಳ ಮಾಂಸವಾಗಲಿ, ರಕ್ತವಾಗಲಿ ಅಲ್ಲಾಹನಿಗೆ ತಲಪುವುದಿಲ್ಲ. ಆದರೆ ಅವನಿಗೆ ನಿಮ್ಮ 'ಧರ್ಮನಿಷ್ಠೆ' ತಲಪುತ್ತದೆ. ಅವನು ನಿಮಗೆ ಸನ್ಮಾರ್ಗವನ್ನು ದಯಪಾಲಿಸಿದ್ದಕ್ಕಾಗಿ ನೀವು ಅವನ ಮಹಾನತೆಯನ್ನು ಕೊಂಡಾಡಬೇಕೆಂದು ಅವನು ಅವುಗಳನ್ನು ನಿಮಗಾಗಿ ಹೀಗೆ ನಿಯಂತ್ರಿಸಿಕೊಟ್ಟಿರುತ್ತಾನೆ[11] ಮತ್ತು ಪೈಗಂಬರರೇ, ಸಜ್ಜನರಿಗೆ ಸುವಾರ್ತೆ ನೀಡಿರಿ.

لَنْ يَنَالَ اللَّهَ لُحُومُهَا وَلَا دِمَاؤُهَا
وَلَٰكِنْ يَنَالُهُ التَّقْوَىٰ مِنْكُمْ ۚ كَذَٰلِكَ
سَخَّرَهَا لَكُمْ لِتُكَبِّرُوا اللَّهَ عَلَىٰ مَا
هَدَاكُمْ ۗ وَبَشِّرِ الْمُحْسِنِينَ ٣٧

38. ನಿಶ್ಚಯವಾಗಿಯೂ ಅಲ್ಲಾಹನು ಸತ್ಯವಿಶ್ವಾಸಿಗಳ ಪರವಾಗಿ ರಕ್ಷಣೆ ಮಾಡುತ್ತಾನೆ. ಖಂಡಿತವಾಗಿಯೂ ಅಲ್ಲಾಹನು ಯಾವುದೇ ವಿಶ್ವಾಸ ಘಾತುಕ ಕೃತಘ್ನನನ್ನು ಮೆಚ್ಚುವುದಿಲ್ಲ.

إِنَّ اللَّهَ يُدَافِعُ عَنِ الَّذِينَ آمَنُوا ۗ إِنَّ
اللَّهَ لَا يُحِبُّ كُلَّ خَوَّانٍ كَفُورٍ ٣٨

39. ಯಾರ ವಿರುದ್ಧ ಯುದ್ಧ ನಡೆಸಲಾಗುತ್ತಿದೆಯೋ ಅವರಿಗೆ ಅನುಮತಿ ನೀಡಲಾಗಿದೆ. ಏಕೆಂದರೆ ಅವರು ಮರ್ದಿತರು.[12] ಮತ್ತು ನಿಶ್ಚಯವಾಗಿಯೂ ಅಲ್ಲಾಹನು ಅವರಿಗೆ ಸಹಾಯ ಮಾಡಲು ಸಮರ್ಥನು.

أُذِنَ لِلَّذِينَ يُقَاتَلُونَ بِأَنَّهُمْ ظُلِمُوا ۚ
وَإِنَّ اللَّهَ عَلَىٰ نَصْرِهِمْ لَقَدِيرٌ ٣٩

40. ಇವರು, "ನಮ್ಮ ಪ್ರಭು ಅಲ್ಲಾಹ್" ಎಂದಿಷ್ಟೇ ಹೇಳಿದ

الَّذِينَ أُخْرِجُوا مِنْ دِيَارِهِمْ بِغَيْرِ

10. ಬೆನ್ನು ನೆಲಕ್ಕೆ ತಾಗುವುದೆಂದರೆ ಅವು ಭೂಮಿಗೆ ಬಿದ್ದು ಬಿಡುವುದು ಎಂದು ಮಾತ್ರವಲ್ಲ, ಬದಲಾಗಿ ಬಿದ್ದು ಸ್ತಬ್ಧವಾಗಿ ಬಿಡುವುದು, ಹೊರಳಾಟ ನಿಂತು ಪ್ರಾಣ ಸಂಪೂರ್ಣ ಹೋಗಿ ಬಿಡುವುದು.

11. ಅರ್ಥಾತ್- ಅವನ ಮಹಾನತೆ ಮತ್ತು ಶ್ರೇಷ್ಠತೆಯನ್ನು ಮನಃಪೂರ್ವಕ ಒಪ್ಪಿಕೊಳ್ಳಿರಿ. ನಿಮ್ಮ ವರ್ತನೆಯ ಮೂಲಕ ಅದನ್ನು ಬಹಿರಂಗಪಡಿಸಿರಿ. ಇದು ಪ್ರಾಣಿ ಬಲಿಯ ಆದೇಶದ ಉದ್ದೇಶ ಮತ್ತು ಔಚಿತ್ಯದ ಕಡೆಗಿರುವ ಸೂಚನೆ. ಪ್ರಾಣಿಗಳನ್ನು ನಿಯಂತ್ರಣಕ್ಕೆ ಕೊಡಲಾದ ಬಗ್ಗೆ ಕೃತಜ್ಞತೆ ಪ್ರಕಟಿಸುವುದು ಮಾತ್ರ ಪ್ರಾಣಿಬಲಿಯ ಉದ್ದೇಶವಲ್ಲ. ಈ ಪ್ರಾಣಿಗಳು ಯಾರಿಗೆ ಸೇರಿವೆಯೋ ಮತ್ತು ಯಾರು ಅದನ್ನು ನಮ್ಮ ನಿಯಂತ್ರಣಕ್ಕೆ ಕೊಟ್ಟಿದ್ದಾನೋ ಅವನ ಒಡೆತನದ ಹಕ್ಕುಗಳನ್ನು ಮನಸಾರೆಯೂ ಕ್ರಿಯಾತ್ಮಕವಾಗಿಯೂ ಸಮ್ಮತಿಸುವುದು ಹಾಗೂ ಈ ಸೊತ್ತುಗಳೆಲ್ಲವೂ ನಮಗೆ ಸೇರಿದ್ದೆಂಬ ಭ್ರಮೆಗೆ ಎಂದೂ ಈಡಾಗದಿರುವುದು ಕೂಡ ಪ್ರಾಣಿಬಲಿಯ ಆದೇಶದ ಉದ್ದೇಶವಾಗಿದೆ.

12. ಇದು ಅಲ್ಲಾಹನ ಮಾರ್ಗದಲ್ಲಿ ಹೋರಾಟ ನಡೆಸುವ ಕುರಿತು ಅವತೀರ್ಣಗೊಂಡ ಚೊಚ್ಚಲ ಸೂಕ್ತ. ಈ ಸೂಕ್ತದಲ್ಲಿ ಅನುಮತಿ ಮಾತ್ರ ನೀಡಲಾಗಿತ್ತು. ಅನಂತರ ಅಲ್ ಬಕರಃ ಅಧ್ಯಾಯದ ಸೂಕ್ತ 190ರಿಂದ 193, 216 ಮತ್ತು 224 ಅವತೀರ್ಣಗೊಂಡವು. ಅವುಗಳಲ್ಲಿ ಯುದ್ಧದ ಆದೇಶ ಕೊಡಲಾಯಿತು. ಈ ಆದೇಶಗಳ ನಡುವೆ ಕೇವಲ ಕೆಲವು ತಿಂಗಳುಗಳ ಅಂತರವಿದೆ. ನಮ್ಮ ಸಂಶೋಧನೆಯ ಪ್ರಕಾರ ಹಿಜರಿಶಕೆ ಒಂದರ ದುಲ್‌ಹಜ್ಜ್ ತಿಂಗಳಲ್ಲಿ 'ಅನುಮತಿ'ಯ ಸೂಕ್ತ ಅವತೀರ್ಣಗೊಂಡಿತು. ಯುದ್ಧದ ಆದೇಶ ಬದ್ರ್ ಯುದ್ಧಕ್ಕೆ ಸ್ವಲ್ಪ ಮೊದಲು ಹಿಜರಿ ಶಕೆ ಎರಡರ ರಜಬ್ ಅಥವಾ ಶಅಬಾನ್ ತಿಂಗಳಲ್ಲಿ ಅವತೀರ್ಣಗೊಂಡಿತು.

ತಪ್ಪಿಗಾಗಿ ತಮ್ಮ ಮನೆಗಳಿಂದ ಅನ್ಯಾಯವಾಗಿ ಹೊರ ಹಾಕಲ್ಪಟ್ಟವರು. ಅಲ್ಲಾಹನು ಜನರಲ್ಲಿ ಕೆಲವರನ್ನು ಬೇರೆ ಕೆಲವರ ಮೂಲಕ ನೀಗಿಸದಿರುತ್ತಿದ್ದರೆ ಅಲ್ಲಾಹನ ನಾಮವನ್ನು ಅತಿ ಹೆಚ್ಚಾಗಿ ಸ್ಮರಿಸಲಾಗುತ್ತಿರುವ ಆಶ್ರಮಗಳೂ ಇಗರ್ಜಿಗಳೂ ಯಹೂದಿಯರ ಆರಾಧನಾಲಯಗಳೂ ಮಸೀದಿಗಳೂ ಧ್ವಂಸಗೊಳ್ಳುತ್ತಿದ್ದುವು. ಯಾರು ಅಲ್ಲಾಹನಿಗೆ ಸಹಾಯ ಮಾಡುವವರೋ ಅವರಿಗೆ ಅವನು ಖಂಡಿತ ಸಹಾಯ ಮಾಡುವವನು.[13] ಅಲ್ಲಾಹನು ಮಹಾ ಶಕ್ತಿವಂತನೂ ಪ್ರಬಲನೂ ಆಗಿರುತ್ತಾನೆ.

حَقٍّ اِلَّآ اَنْ يَّقُوْلُوْا رَبُّنَا اللّٰهُ ؕ وَلَوْ
لَا دَفْعُ اللّٰهِ النَّاسَ بَعْضَهُمْ بِبَعْضٍ
لَّهُدِّمَتْ صَوَامِعُ وَبِيَعٌ وَّصَلَوٰتٌ وَّ
مَسٰجِدُ يُذْكَرُ فِيْهَا اسْمُ اللّٰهِ كَثِيْرًا ؕ
وَلَيَنْصُرَنَّ اللّٰهُ مَنْ يَّنْصُرُهٗ ؕ اِنَّ
اللّٰهَ لَقَوِىٌّ عَزِيْزٌ ۝٤٠

41. (ಇವರು ಎಂಥವರೆಂದರೆ) ನಾವು ಇವರಿಗೆ ಭೂಮಿಯಲ್ಲಿ ಅಧಿಕಾರ ಪ್ರದಾನ ಮಾಡಿದರೆ ಇವರು ನಮಾಝ್ ಸಂಸ್ಥಾಪಿಸುವರು, ಝಕಾತ್ ಕೊಡುವರು, ಒಳಿತಿನ ಆಜ್ಞೆ ಕೊಡುವರು ಮತ್ತು ಕೆಡುಕಿನಿಂದ ತಡೆಯುವರು ಮತ್ತು ಸಕಲ ವ್ಯವಹಾರಗಳ ಅಂತಿಮ ಪರಿಣಾಮವು ಅಲ್ಲಾಹನ ಕೈಯಲ್ಲಿದೆ.

اَلَّذِيْنَ اِنْ مَّكَّنّٰهُمْ فِى الْاَرْضِ
اَقَامُوا الصَّلٰوةَ وَ اٰتَوُا الزَّكٰوةَ وَاَمَرُوْا
بِالْمَعْرُوْفِ وَنَهَوْا عَنِ الْمُنْكَرِ ؕ
وَلِلّٰهِ عَاقِبَةُ الْاُمُوْرِ ۝٤١

42-43 ಪೈಗಂಬರರೇ, ಅವರು (ಸತ್ಯನಿಷೇಧಿಗಳು) ನಿಮ್ಮನ್ನು ಸುಳ್ಳಾಗಿ ಸುತ್ತಿದ್ದರೆ ಅವರಿಗಿಂತ ಮುಂಚೆ ನೂಹರ ಜನಾಂಗ, ಆದ್, ಸಮೂದ್, ಇಬ್‌ರಾಹೀಮರ ಜನಾಂಗ, ಲೂತರ ಜನಾಂಗ-

وَاِنْ يُّكَذِّبُوْكَ فَقَدْ كَذَّبَتْ قَبْلَهُمْ
قَوْمُ نُوْحٍ وَّعَادٌ وَّثَمُوْدُ ۝٤٢
وَقَوْمُ اِبْرٰهِيْمَ وَقَوْمُ لُوْطٍ ۝٤٣

44. ಮತ್ತು ಮದ್‌ಯನಿನವರು ಸಹ ಸುಳ್ಳಾಗಿಸಿದ್ದಾರೆ ಮತ್ತು ಮೂಸಾ ಸಹ ಸುಳ್ಳಾಗಿಸಲ್ಪಟ್ಟಿದ್ದಾರೆ. ನಾನು ಈ ಎಲ್ಲ ಸತ್ಯನಿಷೇಧಿಗಳಿಗೆ ಮೊದಲು ಕಾಲಾವಕಾಶ ನೀಡಿದೆನು, ಅನಂತರ ಹಿಡಿದು ಬಿಟ್ಟೆನು. ನನ್ನ ಶಿಕ್ಷೆ ಹೇಗಿತ್ತೆಂಬುದನ್ನು ನೋಡಿಕೊಳ್ಳಿರಿ.

وَّاَصْحٰبُ مَدْيَنَ ۚ وَكُذِّبَ مُوْسٰى
فَاَمْلَيْتُ لِلْكٰفِرِيْنَ ثُمَّ اَخَذْتُهُمْ ۚ
فَكَيْفَ كَانَ نَكِيْرِ ۝٤٤

45. ಎಷ್ಟೋ ಅಪರಾಧಿ ನಾಡುಗಳನ್ನು ನಾವು ನಾಶಗೊಳಿಸಿದೆವು. ಇಂದು ಅವುಗಳು ಬುಡಮೇಲಾಗಿ ಬಿದ್ದಿವೆ. ಎಷ್ಟೋ ಬಾವಿಗಳು ಪಾಳುಬಿದ್ದಿವೆ. ಎಷ್ಟೋ ಅರಮನೆಗಳು ಭಗ್ನಾವಶೇಷಗಳಾಗಿ ಹೋಗಿವೆ.

فَكَاَيِّنْ مِّنْ قَرْيَةٍ اَهْلَكْنٰهَا وَهِىَ
ظَالِمَةٌ فَهِىَ خَاوِيَةٌ عَلٰى عُرُوْشِهَا
وَبِئْرٍ مُّعَطَّلَةٍ وَّقَصْرٍ مَّشِيْدٍ ۝٤٥

46. ಇವರ ಹೃದಯಗಳು ಗ್ರಹಿಸುವಂತಾಗಲು ಅಥವಾ ಇವರ ಕಿವಿಗಳು ಆಲಿಸುವಂತಾಗಲು ಇವರು ಭೂಮಿಯಲ್ಲಿ ಸಂಚರಿಸ

اَفَلَمْ يَسِيْرُوْا فِى الْاَرْضِ فَتَكُوْنَ
لَهُمْ قُلُوْبٌ يَّعْقِلُوْنَ بِهَآ اَوْ اٰذَانٌ

13. ಈ ವಿಷಯ ಪವಿತ್ರ ಕುರ್‌ಆನಿನಲ್ಲಿ ಅನೇಕ ಕಡೆ ಪ್ರಸ್ತಾವಿಸಲ್ಪಟ್ಟಿದೆ. ದೇವನ ಸೃಷ್ಟಿಗಳನ್ನು ಏಕದೇವತ್ವದ ಕಡೆಗೆ ಕರೆಯುವ, ಸತ್ಯಧರ್ಮದ ಸಂಸ್ಥಾಪನೆ ಮಾಡುವ ಮತ್ತು ಕೆಡುಕಿನ ಜಾಗದಲ್ಲಿ ಒಳಿತನ್ನು ಪ್ರಚುರ ಪಡಿಸಲು ಶ್ರಮಿಸುವವರನ್ನು ಇಲ್ಲಿ ಅಲ್ಲಾಹನ ಸಹಾಯಕರು ಎಂದು ಕರೆಯಲಾಗಿದೆ. ಏಕೆಂದರೆ ಅದು ಅಲ್ಲಾಹನ ಕೆಲಸವಾಗಿದೆ. ಅದನ್ನು ನೆರವೇರಿಸಲು ಅವರು ಸಹಾಯ ಮಾಡುತ್ತಾರೆ.

ಲಿಲ್ಲವೇ? ವಾಸ್ತವದಲ್ಲಿ ಕಣ್ಣುಗಳು ಕುರುಡಾಗುವುದಿಲ್ಲ, ಆದರೆ ಎದೆಗಳೊಳಗಿರುವ ಹೃದಯಗಳು ಕುರುಡಾಗಿ ಬಿಡುತ್ತವೆ.

يَّسْمَعُوْنَ بِهَا ۚ فَاِنَّهَا لَا تَعْمَى الْاَبْصَارُ وَلٰكِنْ تَعْمَى الْقُلُوْبُ الَّتِيْ فِي الصُّدُوْرِ ﴿٤٦﴾

47. ಇವರು ಯಾತನೆಗಾಗಿ ತವಕ ಪಡುತ್ತಾರೆ. ಅಲ್ಲಾಹನು ಎಂದೆಂದಿಗೂ ತನ್ನ ವಾಗ್ದಾನವನ್ನು ಉಲ್ಲಂಘಿಸಲಾರ. ಆದರೆ ನಿನ್ನ ಪ್ರಭುವಿನ ಬಳಿಯ ಒಂದು ದಿವಸವು ನಿಮ್ಮ ಗಣನೆಯ ಸಾವಿರ ವರ್ಷಗಳಿಗೆ ಸಮಾನವಾಗಿದೆ.[14]

وَيَسْتَعْجِلُوْنَكَ بِالْعَذَابِ وَلَنْ يُّخْلِفَ اللّٰهُ وَعْدَهٗ ؕ وَاِنَّ يَوْمًا عِنْدَ رَبِّكَ كَاَلْفِ سَنَةٍ مِّمَّا تَعُدُّوْنَ ﴿٤٧﴾

48. ಅಕ್ರಮಿಗಳಾಗಿದ್ದ ಅವೆಷ್ಟೋ ನಾಡುಗಳಿದ್ದುವು. ನಾನು ಅವುಗಳಿಗೆ ಮೊದಲು ಕಾಲಾವಕಾಶ ನೀಡಿದೆನು, ಅನಂತರ ಹಿಡಿದುಬಿಟ್ಟೆನು ಮತ್ತು ಎಲ್ಲರೂ ಮರಳಿ ಬರಬೇಕಾದುದು ನನ್ನ ಕಡೆಗೇ ಆಗಿದೆ.

وَكَاَيِّنْ مِّنْ قَرْيَةٍ اَمْلَيْتُ لَهَا وَهِيَ ظَالِمَةٌ ثُمَّ اَخَذْتُهَا ۚ وَاِلَيَّ الْمَصِيْرُ ﴿٤٨﴾

٦ ع ١٣

49. ಪೈಗಂಬರರೇ ಹೇಳಿರಿ - "ಜನರೇ, ನಾನಂತು ನಿಮಗೆ (ಆಪತ್ಕಾಲ ಬರುವುದಕ್ಕೆ ಮುಂಚೆ) ಸುಸ್ಪಷ್ಟ ಎಚ್ಚರಿಕೆ ಕೊಡುವ ಓರ್ವ ವ್ಯಕ್ತಿ ಮಾತ್ರವಾಗಿರುತ್ತೇನೆ.

قُلْ يٰۤاَيُّهَا النَّاسُ اِنَّمَاۤ اَنَا لَكُمْ نَذِيْرٌ مُّبِيْنٌ ﴿٤٩﴾ۚ

50. ಇನ್ನು ಸತ್ಯವಿಶ್ವಾಸವಿರಿಸುವವರಿಗೆ ಮತ್ತು ಸತ್ಕರ್ಮವೆಸಗುವವರಿಗೆ ಕ್ಷಮೆಯೂ ಗೌರವಪೂರ್ಣ ಜೀವನಾಧಾರವೂ ಇವೆ.

فَالَّذِيْنَ اٰمَنُوْا وَعَمِلُوا الصّٰلِحٰتِ لَهُمْ مَّغْفِرَةٌ وَّرِزْقٌ كَرِيْمٌ ﴿٥٠﴾

51. ಮತ್ತು ನಮ್ಮ ವಚನಗಳನ್ನು ಕೀಳಾಗಿಸಲು ಪ್ರಯತ್ನಿಸುವವರು ನರಕಾಗ್ನಿಯವರಾಗಿದ್ದಾರೆ."

وَالَّذِيْنَ سَعَوْا فِيْۤ اٰيٰتِنَا مُعٰجِزِيْنَ اُولٰٓئِكَ اَصْحٰبُ الْجَحِيْمِ ﴿٥١﴾

52. ಪೈಗಂಬರರೇ, ನಾವು ನಿಮಗಿಂತ ಮುಂಚೆ ಯಾವ ಸಂದೇಶವಾಹಕ ಅಥವಾ ಪ್ರವಾದಿಯವರನ್ನು ಕಳುಹಿಸಿದ್ದೆವೋ ಅವರು ಇಚ್ಛಿಸಿದಾಗ ಅವರ ಸದಿಚ್ಛೆಯಲ್ಲಿ ಶೈತಾನನು ತಡೆಯನ್ನು ಉಂಟುಮಾಡದೆ ಇರಲಿಲ್ಲ. ಹೀಗೆ ಶೈತಾನನು ಉಂಟು ಮಾಡುವ ಪ್ರತಿಯೊಂದು ತಡೆಯನ್ನು ಅಲ್ಲಾಹನು ಅಳಿಸಿ ಬಿಡುತ್ತಾನೆ ಮತ್ತು ತನ್ನ ವಚನಗಳನ್ನು ಸುದೃಢಗೊಳಿಸಿ ಬಿಡುತ್ತಾನೆ. ಅಲ್ಲಾಹನು ಸರ್ವಜ್ಞನೂ ಯುಕ್ತಿಪೂರ್ಣನೂ ಆಗಿರುತ್ತಾನೆ.

وَمَاۤ اَرْسَلْنَا مِنْ قَبْلِكَ مِنْ رَّسُوْلٍ وَّلَا نَبِيٍّ اِلَّاۤ اِذَا تَمَنّٰۤى اَلْقَى الشَّيْطٰنُ فِيْۤ اُمْنِيَّتِهٖ ۚ فَيَنْسَخُ اللّٰهُ مَا يُلْقِي الشَّيْطٰنُ ثُمَّ يُحْكِمُ اللّٰهُ اٰيٰتِهٖ ؕ وَاللّٰهُ عَلِيْمٌ حَكِيْمٌ ﴿٥٢﴾ۙ

14. ಅರ್ಥಾತ್- ಮಾನವ ಇತಿಹಾಸದಲ್ಲಿ ದೇವನ ತೀರ್ಮಾನಗಳು ನಿಮ್ಮ ಘಳಿಗೆ ಮತ್ತು ಪಂಚಾಂಗವನ್ನು ಅನುಸರಿಸಿ ನಡೆಯುವುದಿಲ್ಲ. ಇಂದು ತಳೆಯಲಾದ ಸರಿಯೋ ತಪ್ಪೋ ಆದ ಒಂದು ಧೋರಣೆಯ ಫಲಿತಾಂಶ ನಾಳೆಯೇ ಪ್ರಕಟವಾಗಿ ಬಿಡುವುದಿಲ್ಲ. ಇಂತಿಂತಹ ಧೋರಣೆ ಕೈಗೊಂಡರೆ ಅದರ ಪರಿಣಾಮ ನಿಮ್ಮ ವಿನಾಶವಾಗುವುದು ಎಂದ ತಕ್ಷಣ, “ನಾವಂತೂ ಹತ್ತಿಪ್ಪತ್ತು ಅಥವಾ ಇಪ್ಪತ್ತೈದು ವರ್ಷಗಳಿಂದ ಇದೇ ಧೋರಣೆಯಲ್ಲಿದ್ದೇವೆ. ನಮಗೇನೂ ಕೇಡುಂಟಾಗಲಿಲ್ಲ” ಎಂದು ಸಮರ್ಥನೆ ಮಾಡುವ ಜನಾಂಗದ ನಿಲುವು ಮೂರ್ಖತನದಿಂದ ಕೂಡಿದ್ದಾಗಿದೆ. ಐತಿಹಾಸಿಕ ಪರಿಣಾಮ ಗೋಚರಿಸಲು ದಿನ, ತಿಂಗಳು ಮತ್ತು ವರ್ಷಗಳೇ ಏಕೆ ಶತಮಾನಗಳು ಕಳೆದರೂ ಆಶ್ಚರ್ಯವಿಲ್ಲ.

53. ಹೃದಯಗಳಿಗೆ (ಕಾಪಟ್ಯದ) ರೋಗ ತಗಲಿದವರಿಗೆ ಹಾಗೂ ಕಲುಷಿತ ಹೃದಯದವರಿಗೆ ಶೈತಾನನು ಉಂಟು ಮಾಡಿದ ಕೇಡನ್ನು ಪರೀಕ್ಷಾ ಸಾಧನವನ್ನಾಗಿ ಮಾಡಲಿಕ್ಕಾಗಿ (ಅಲ್ಲಾಹನು ಹೀಗೆ ಮಾಡಲು ಬಿಡುತ್ತಾನೆ.) ವಾಸ್ತವದಲ್ಲಿ ಈ ಅಕ್ರಮಿಗಳು ದ್ವೇಷದಲ್ಲಿ ಬಹುದೂರ ಹೋಗಿಬಿಟ್ಟಿದ್ದಾರೆ.

لِّيَجْعَلَ مَا يُلْقِى الشَّيْطٰنُ فِتْنَةً لِّلَّذِيْنَ
فِىْ قُلُوْبِهِمْ مَّرَضٌ وَّ الْقَاسِيَةِ قُلُوْبُهُمْ ؕ
وَاِنَّ الظّٰلِمِيْنَ لَفِىْ شِقَاقٍۭ بَعِيْدٍ ﴿۵۳﴾

54. ಇದು ನಿನ್ನ ಪ್ರಭುವಿನ ಕಡೆಯಿಂದ ಬಂದಿರುವ ಸತ್ಯವೆಂದು ಜ್ಞಾನ ಸಂಪತ್ತು ಹೊಂದಿದವರು ಅರಿತು ಕೊಳ್ಳುವಂತಾಗಲು, ಅವರು ಇದರ ಮೇಲೆ ವಿಶ್ವಾಸವಿರಿಸುವಂತಾಗಲು ಮತ್ತು ಅವರ ಹೃದಯಗಳು ಇದರ ಮುಂದೆ ಬಾಗುವಂತಾಗಲು (ಅಲ್ಲಾಹನು ಹೀಗಾಗಲು ಬಿಡುತ್ತಾನೆ) ನಿಶ್ಚಯವಾಗಿಯೂ ಅಲ್ಲಾಹನು ವಿಶ್ವಾಸವಿರಿಸುವವರಿಗೆ ಸದಾ ಸನ್ಮಾರ್ಗವನ್ನು ತೋರಿಸುತ್ತಾನೆ.[15]

وَّلِيَعْلَمَ الَّذِيْنَ اُوْتُوا الْعِلْمَ اَنَّهُ
الْحَقُّ مِنْ رَّبِّكَ فَيُؤْمِنُوْا بِهٖ فَتُخْبِتَ
لَهٗ قُلُوْبُهُمْ ؕ وَاِنَّ اللّٰهَ لَهَادِ الَّذِيْنَ
اٰمَنُوْۤا اِلٰى صِرَاطٍ مُّسْتَقِيْمٍ ﴿۵۴﴾

55. ಸತ್ಯನಿಷೇಧಿಗಳ ಮೇಲೆ ಪುನರುತ್ಥಾನದ ಘಳಿಗೆ ಹಠಾತ್ತನೆ ಬರುವ ವರೆಗೂ ಇಲ್ಲವೇ ಒಂದು ಅಶುಭ ದಿನದ ಯಾತನೆ ಅವರ ಮೇಲೆ ಎರಗುವ ವರೆಗೂ ಅವರು ಇದರ ಬಗ್ಗೆ ಸಂದೇಹ ದಲ್ಲೇ ಬಿದ್ದುಕೊಂಡಿರುವರು.

وَلَا يَزَالُ الَّذِيْنَ كَفَرُوْا فِىْ مِرْيَةٍ
مِّنْهُ حَتّٰى تَاْتِيَهُمُ السَّاعَةُ بَغْتَةً
اَوْ يَاْتِيَهُمْ عَذَابُ يَوْمٍ عَقِيْمٍ ﴿۵۵﴾

56. ಅಂದು ಪ್ರಭುತ್ವ ಅಲ್ಲಾಹನದ್ದಾಗಿರುವುದು ಮತ್ತು ಅವನು ಇವರ ನಡುವೆ ತೀರ್ಮಾನ ಮಾಡಿ ಬಿಡುವನು. ಸತ್ಯವಿಶ್ವಾಸ ವಿರಿಸುವವರೂ ಸತ್ಕರ್ಮವೆಸಗುವವರೂ ಸರ್ವ ಸಂಪದ್ಭರಿತ ಸ್ವರ್ಗೋದ್ಯಾನಗಳಿಗೆ ಹೋಗುವರು.

اَلْمُلْكُ يَوْمَئِذٍ لِّلّٰهِ ؕ يَحْكُمُ بَيْنَهُمْ ؕ
فَالَّذِيْنَ اٰمَنُوْا وَعَمِلُوا الصّٰلِحٰتِ فِىْ
جَنّٰتِ النَّعِيْمِ ﴿۵۶﴾

15. ಅರ್ಥಾತ್- ಪಿಶಾಚಿಯ ಪ್ರಲೋಭನೆಗಳನ್ನು ಅಲ್ಲಾಹನು ಪರೀಕ್ಷೆಯನ್ನಾಗಿಯೂ, ಅಸಲಿ ನಕಲಿಗಳನ್ನು ಬೇರ್ಪಡಿಸುವ ಸಾಧನವನ್ನಾಗಿಯೂ ಮಾಡಿದ್ದಾನೆ. ಆದರೆ ಕೆಟ್ಟ ಮನೋಭಾವದ ವ್ಯಕ್ತಿಗಳು ಅದರಿಂದ ತಪ್ಪಾದ ಫಲಿತಾಂಶಗಳನ್ನು ಪಡೆಯುತ್ತಾರೆ. ಅದು ಅವರ ಪಾಲಿಗೆ ಪಥಭ್ರಷ್ಟತೆಯ ಸಾಧನವಾಗಿ ಮಾರ್ಪಡುತ್ತದೆ. ಶುದ್ಧ ಮನಸ್ಸಿನ ಜನರಿಗೆ ಇವುಗಳು ಪ್ರವಾದಿಗಳು ಮತ್ತು ಅಲ್ಲಾಹನ ಸತ್ಯತೆಯ ಬಗ್ಗೆ ಭರವಸೆಯುಂಟು ಮಾಡುತ್ತವೆ. ಶೈತಾನನ ಪ್ರಲೋಭನೆಗಳನ್ನು ಅವರು ಸ್ಪಷ್ಟವಾಗಿ ಗುರುತಿಸುತ್ತಾರೆ. ಈ ಸಂದೇಶ ಖಂಡಿತವಾಗಿಯೂ ಸತ್ಯ ಮತ್ತು ಸನ್ಮಾರ್ಗದ ಸಂದೇಶವಾಗಿದೆ, ಅನ್ಯಥಾ ಪಿಶಾಚಿ ಇಷ್ಟು ಕಳವಳಕ್ಕೆ ಈಡಾಗುತ್ತಿರಲಿಲ್ಲ ಎಂಬ ಬಗ್ಗೆ ಅವರು ಸಂತೃಪ್ತರಾಗುತ್ತಾರೆ. ಪ್ರವಾದಿವರ್ಯರ(ಸ) ಸಂದೇಶ ಆಗ ಯಾವ ಘಟ್ಟದಲ್ಲಿತ್ತೋ ಅದನ್ನು ಕಂಡು ಕೇವಲ ಬಾಹ್ಯದೃಷ್ಟಿಯಿಂದ ನೋಡುವವರು ಅವರು ತಮ್ಮ ಉದ್ದೇಶದಲ್ಲಿ ಪರಾಜಿತರಾದರು ಎಂಬ ತಪ್ಪುಕಲ್ಪನೆಗೆ ಒಳಗಾಗಿದ್ದರು. ಅಲ್ಲಿ ಪ್ರತ್ಯಕ್ಷದರ್ಶಿಗಳಿಗೆ ಕಾಣುತ್ತಿದ್ದುದೇನೆಂದರೆ ಒಬ್ಬ ವ್ಯಕ್ತಿಯಿದ್ದಾನೆ, ಸಮಸ್ತ ಜನಾಂಗ ತನ್ನ ಮೇಲೆ ವಿಶ್ವಾಸವಿಡಬೇಕೆಂದು ಅವನು ತವಕಿಸುತ್ತಿದ್ದಾನೆ. ಕೊನೆಗೆ ಅವನು ಮಕ್ಕಾ ಬಿಟ್ಟು ವಲಸೆ ಹೋಗಬೇಕಾಯಿತು. ಹೀಗೆ ಮಕ್ಕಾದ ಸತ್ಯನಿಷೇಧಿಗಳು ಸಫಲರಾದರು. ಇಂತಹ ಸಂದರ್ಭದಲ್ಲಿ ನಾನು ಅಲ್ಲಾಹನ ಪ್ರವಾದಿ ಮತ್ತು ಅಲ್ಲಾಹನ ಬೆಂಬಲ ತನಗೆ ಸದಾ ಪ್ರಾಪ್ತವಿದೆ ಎಂಬ ಅವರ ಮಾತು ಹಾಗೂ ಪ್ರವಾದಿಯನ್ನು ಸುಳ್ಳಾಗಿಸುವ ಸಮುದಾಯದ ಮೇಲೆ ಅಲ್ಲಾಹನ ಯಾತನೆ ಎರಗುತ್ತದೆ ಎಂಬ ಕುರ್‌ಆನಿನ ಪ್ರಕಟಣೆಯನ್ನು ಕಂಡಾಗ ಅವರ ಮತ್ತು ಕುರ್‌ಆನಿನ ಸತ್ಯತೆಯ ಬಗ್ಗೆಯೇ ಅವರು ಸಂಶಯ ತಾಳುತ್ತಿದ್ದರು. ಪ್ರವಾದಿವರ್ಯರ(ಸ) ವಿರೋಧಿಗಳು, “ಎಲ್ಲಿ ಹೋಯಿತು ಅಲ್ಲಾಹನ ಸಹಾಯ, ಯಾತನೆ ಎರಗುವ ಬಗೆಗಿನ ಎಚ್ಚರಿಕೆ ಏನಾಯಿತು, ನಮ್ಮನ್ನು ಎಚ್ಚರಿಸಲಾಗುತ್ತಿರುವಂತಹ ಆ ಯಾತನೆ ಈಗಲೇ ಏಕೆ ಎರಗುವುದಿಲ್ಲ” ಎಂದು ಅವರೊಡನೆ ಕೇಳುತ್ತಿದ್ದರು. ಅದರ ಉತ್ತರವನ್ನೇ ಈ ಸೂಕ್ತಗಳಲ್ಲಿ ನೀಡಲಾಗಿದೆ.

57. ಸತ್ಯವನ್ನು ನಿಷೇಧಿಸಿದವರಿಗೂ ನಮ್ಮ ವಚನಗಳನ್ನು ಸುಳ್ಳಾಗಿಸಿ ದವರಿಗೂ ಅಪಮಾನಕರ ಯಾತನೆ ಸಿಗುವುದು.

وَالَّذِينَ كَفَرُوا وَكَذَّبُوا بِآيَاتِنَا
فَأُولَٰئِكَ لَهُمْ عَذَابٌ مُّهِينٌ ﴿٥٧﴾

58. ಅಲ್ಲಾಹನ ಮಾರ್ಗದಲ್ಲಿ ವಲಸೆ ಹೋದವರು, ತರುವಾಯ ವಧಿಸಲ್ಪಟ್ಟವರು ಅಥವಾ ಮೃತರಾದವರು- ಇವರಿಗೆ ಅಲ್ಲಾಹನು ಶ್ರೇಷ್ಠ ಜೀವನಾಧಾರವನ್ನು ದಯಪಾಲಿಸುವನು. ನಿಶ್ಚಯವಾಗಿಯೂ ಅಲ್ಲಾಹನೇ ಅತ್ಯುತ್ತಮ ಜೀವನಾಧಾರ ದಯಪಾಲಿಸುವವನಾಗಿ ದ್ದಾನೆ.

وَالَّذِينَ هَاجَرُوا فِي سَبِيلِ اللَّهِ ثُمَّ
قُتِلُوا أَوْ مَاتُوا لَيَرْزُقَنَّهُمُ اللَّهُ رِزْقًا
حَسَنًا ۚ وَإِنَّ اللَّهَ لَهُوَ خَيْرُ الرَّازِقِينَ ﴿٥٨﴾

59. ಅವರು ಪರಮ ಸಂತುಷ್ಟರಾಗುವಂತಹ ಸ್ಥಾನಕ್ಕೆ ಅವನು ಅವರನ್ನು ತಲುಪಿಸಿ ಬಿಡುವನು. ನಿಶ್ಚಯವಾಗಿಯೂ ಅಲ್ಲಾಹನು ಸರ್ವಜ್ಞನೂ ಸಹನಶೀಲನೂ ಆಗಿರುತ್ತಾನೆ.

لَيُدْخِلَنَّهُم مُّدْخَلًا يَرْضَوْنَهُ ۗ وَإِنَّ
اللَّهَ لَعَلِيمٌ حَلِيمٌ ﴿٥٩﴾

60. ಇದು ಅವರ ಅಂತಿಮ ಪರಿಣಾಮವಾಯಿತು. ಒಬ್ಬನು ತನಗೆ ಮಾಡಿದಷ್ಟು ಮಾತ್ರ ಮಾಡಿ ಸೇಡು ತೀರಿಸಿದರೆ ಮತ್ತು ಅವನ ಮೇಲೆ ಅತಿರೇಕವೂ ನಡೆದಿದ್ದರೆ ಅಲ್ಲಾಹನು ಖಂಡಿತವಾಗಿಯೂ ಅವನಿಗೆ ಸಹಾಯ ಮಾಡುವನು. ಅಲ್ಲಾಹನು ಮನ್ನಿಸುವವನೂ ಕ್ಷಮಾಶೀಲನೂ ಆಗಿರುತ್ತಾನೆ.

ذَٰلِكَ ۖ وَمَنْ عَاقَبَ بِمِثْلِ مَا عُوقِبَ
بِهِ ثُمَّ بُغِيَ عَلَيْهِ لَيَنصُرَنَّهُ اللَّهُ ۗ إِنَّ
اللَّهَ لَعَفُوٌّ غَفُورٌ ﴿٦٠﴾

61. ಇದೇಕೆಂದರೆ ಇರುಳಿನಿಂದ ಹಗಲನ್ನೂ ಹಗಲಿನಿಂದ ಇರುಳನ್ನೂ ಹೊರತರುವವನು ಅಲ್ಲಾಹನೇ ಆಗಿರುತ್ತಾನೆ. ಅವನು ಸರ್ವ ಶ್ರುತನೂ ಸರ್ವವೀಕ್ಷಕನೂ ಆಗಿರುತ್ತಾನೆ.

ذَٰلِكَ بِأَنَّ اللَّهَ يُولِجُ اللَّيْلَ فِي النَّهَارِ
وَيُولِجُ النَّهَارَ فِي اللَّيْلِ وَأَنَّ اللَّهَ
سَمِيعٌ بَصِيرٌ ﴿٦١﴾

62. ಇದೇಕೆಂದರೆ ಅಲ್ಲಾಹನೇ ಪರಮ ಸತ್ಯ. ಅಲ್ಲಾಹನನ್ನು ಬಿಟ್ಟು ಇವರು ಪ್ರಾರ್ಥಿಸುವಂತಹವುಗಳೆಲ್ಲವೂ ಮಿಥ್ಯ. ಅಲ್ಲಾಹನೇ ಸರ್ವೋನ್ನತನೂ ಮಹಾನನೂ ಆಗಿರುತ್ತಾನೆ.

ذَٰلِكَ بِأَنَّ اللَّهَ هُوَ الْحَقُّ وَأَنَّ مَا
يَدْعُونَ مِن دُونِهِ هُوَ الْبَاطِلُ وَ
أَنَّ اللَّهَ هُوَ الْعَلِيُّ الْكَبِيرُ ﴿٦٢﴾

63. ಅಲ್ಲಾಹ್ ಆಕಾಶದಿಂದ ನೀರು ಸುರಿಸುವುದನ್ನೂ ಅದರಿಂದಾಗಿ ಭೂಮಿಯು ಸಸ್ಯಶ್ಯಾಮಲವಾಗುವುದನ್ನೂ ನೀವು ನೋಡುತ್ತಿಲ್ಲವೇ? ವಾಸ್ತವದಲ್ಲಿ ಅವನು ಸೂಕ್ಷ್ಮಜ್ಞನೂ ವಿವರಪೂರ್ಣನೂ ಆಗಿರುತ್ತಾನೆ.[16]

أَلَمْ تَرَ أَنَّ اللَّهَ أَنزَلَ مِنَ السَّمَاءِ
مَاءً فَتُصْبِحُ الْأَرْضُ مُخْضَرَّةً ۗ إِنَّ
اللَّهَ لَطِيفٌ خَبِيرٌ ﴿٦٣﴾

16. ಅರ್ಥಾತ್- ಸತ್ಯನಿಷೇಧ ಮತ್ತು ಅಕ್ರಮದ ಧೋರಣೆ ತಳೆಯುವವರ ಮೇಲೆ ಯಾತನೆ ಎರಗಿಸುವುದು, ಸತ್ಯವಿಶ್ವಾಸಿಗಳಾದ ಸಜ್ಜನ ದಾಸರನ್ನು ಪುರಸ್ಕರಿಸುವುದು, ಸನ್ಮಾರ್ಗಗಾಮಿಗಳಾದ ಶೋಷಿತ ಜನರನ್ನು ಸಾಂತ್ವನ ಪಡಿಸುವುದು, ಶಕ್ತಿಮೀರಿ ಅಕ್ರಮವನ್ನು ಎದುರಿಸುತ್ತಿರುವ ಸತ್ಯದ ವಾಹಕರಿಗೆ ನೆರವಾಗುವುದು- ಇವೆಲ್ಲದಕ್ಕೂ ಕಾರಣ ಅಲ್ಲಾಹನ ಈ ಗುಣವಿಶೇಷತೆಗಳೇ ಆಗಿವೆ.

64. ಆಕಾಶಗಳಲ್ಲಿರುವುದೂ ಭೂಮಿಯಲ್ಲಿರುವುದೂ ಆತನದೇ. ನಿಶ್ಚಯವಾಗಿಯೂ ಅವನು ನಿರಪೇಕ್ಷನೂ ಪ್ರಶಂಸಾರ್ಹನೂ ಆಗಿರುತ್ತಾನೆ.

لَهٗ مَا فِی السَّمٰوٰتِ وَمَا فِی الْاَرْضِ ؕ وَاِنَّ اللّٰهَ لَهُوَ الْغَنِیُّ الْحَمِیْدُ ۟﴿۶۴﴾ ع ٨ ١٥

65. ಅವನು ಭೂಮಿಯಲ್ಲಿರುವುದೆಲ್ಲವನ್ನೂ ನಿಮಗೆ ಅಧೀನಗೊಳಿಸಿರುವುದನ್ನೂ ನಾವೆಯು ಅವನ ಅಪ್ಪಣೆಯಂತೆ ಸಮುದ್ರದಲ್ಲಿ ಚಲಿಸುವಂತೆ ಅವನೇ ಅದನ್ನು ನಿಯಮಬದ್ಧ ಗೊಳಿಸಿರುವುದನ್ನೂ ಅವನ ಅಪ್ಪಣೆಯಿಲ್ಲದೆ ಆಕಾಶವು ಭೂಮಿಯ ಮೇಲೆ ಬೀಳದಂತೆ ಅವನೇ ಅದನ್ನು ಈ ರೀತಿ ಆಧರಿಸಿರುವುದನ್ನೂ ನೀವು ಕಾಣುತ್ತಿಲ್ಲವೇ? ವಾಸ್ತವದಲ್ಲಿ ಅಲ್ಲಾಹನು ಜನರ ಬಗ್ಗೆ ಮಹಾ ವತ್ಸಲನೂ ಅತ್ಯಂತ ಕರುಣಾನಿಧಿಯೂ ಆಗಿರುತ್ತಾನೆ.

اَلَمْ تَرَ اَنَّ اللّٰهَ سَخَّرَ لَكُمْ مَّا فِی الْاَرْضِ وَالْفُلْكَ تَجْرِیْ فِی الْبَحْرِ بِاَمْرِهٖ ؕ وَیُمْسِكُ السَّمَآءَ اَنْ تَقَعَ عَلَی الْاَرْضِ اِلَّا بِاِذْنِهٖ ؕ اِنَّ اللّٰهَ بِالنَّاسِ لَرَءُوْفٌ رَّحِیْمٌ ﴿۶۵﴾

66. ಅವನೇ ನಿಮಗೆ ಜೀವನ ಪ್ರದಾನ ಮಾಡಿದವನು, ಅವನೇ ನಿಮಗೆ ಮರಣ ಕೊಡುತ್ತಾನೆ ಮತ್ತು ಅವನೇ ನಿಮ್ಮನ್ನು ಪುನಃ ಜೀವಂತ ಗೊಳಿಸುವವನು. ವಾಸ್ತವದಲ್ಲಿ ಮಾನವನು ಮಹಾ ಸತ್ಯನಿಷೇಧಿಯಾಗಿರುವನು.[17]

وَهُوَ الَّذِیْۤ اَحْیَاكُمْ ؗ ثُمَّ یُمِیْتُكُمْ ثُمَّ یُحْیِیْكُمْ ؕ اِنَّ الْاِنْسَانَ لَكَفُوْرٌ ﴿۶۶﴾

67. ಪ್ರತಿಯೊಂದು ಸಮುದಾಯಕ್ಕೂ ನಾವು ಒಂದು ಉಪಾಸನಾ ಕ್ರಮವನ್ನು ನಿಶ್ಚಯಿಸಿದ್ದೇವೆ. ಅದನ್ನು ಅದು ಅನುಸರಿಸುತ್ತದೆ. ಆದುದರಿಂದ ಪೈಗಂಬರರೇ, ಅವರು ಈ ವಿಷಯದಲ್ಲಿ ನಿಮ್ಮೊಡನೆ ಜಗಳಾಡದಿರಲಿ.[18] ನೀವು ನಿಮ್ಮ ಪ್ರಭುವಿನ ಕಡೆಗೆ ಕರೆ ನೀಡಿರಿ. ನಿಶ್ಚಯವಾಗಿಯೂ ನೀವು ನೇರಮಾರ್ಗದಲ್ಲಿದ್ದೀರಿ.

لِكُلِّ اُمَّةٍ جَعَلْنَا مَنْسَكًا هُمْ نَاسِكُوْهُ فَلَا یُنَازِعُنَّكَ فِی الْاَمْرِ وَادْعُ اِلٰی رَبِّكَ ؕ اِنَّكَ لَعَلٰی هُدًی مُّسْتَقِیْمٍ ﴿۶۷﴾

68. ಇನ್ನು ಅವರು ನಿಮ್ಮೊಡನೆ ಜಗಳಾಡಿದರೆ "ನೀವು ಮಾಡುತ್ತಿರುವುದೆಲ್ಲವೂ ಅಲ್ಲಾಹನಿಗೆ ಚೆನ್ನಾಗಿ ಗೊತ್ತಿದೆ.

وَاِنْ جٰدَلُوْكَ فَقُلِ اللّٰهُ اَعْلَمُ بِمَا تَعْمَلُوْنَ ﴿۶۸﴾

69. ನೀವು ಭಿನ್ನಾಭಿಪ್ರಾಯ ತಾಳಿಕೊಂಡಿದ್ದ ಸಕಲ ವಿಷಯಗಳ ಬಗ್ಗೆ ಅಲ್ಲಾಹನು ಪುನರುತ್ಥಾನದ ದಿನ ನಿಮ್ಮ ನಡುವೆ ತೀರ್ಮಾನ ಮಾಡಿ ಬಿಡುವನು" ಎಂದು ಹೇಳಿ ಬಿಡಿರಿ.

اَللّٰهُ یَحْكُمُ بَیْنَكُمْ یَوْمَ الْقِیٰمَةِ فِیْمَا كُنْتُمْ فِیْهِ تَخْتَلِفُوْنَ ﴿۶۹﴾

70. ಆಕಾಶಗಳ ಮತ್ತು ಭೂಮಿಯ ಪ್ರತಿಯೊಂದು ವಿಷಯವೂ

اَلَمْ تَعْلَمْ اَنَّ اللّٰهَ یَعْلَمُ مَا فِی السَّمَآءِ

17. ಅರ್ಥಾತ್- ಇದೆಲ್ಲವನ್ನು ನೋಡಿಯೂ ಅವನು ಪ್ರವಾದಿಗಳು ಸಮರ್ಪಿಸುವ ಸತ್ಯವನ್ನು ನಿರಾಕರಿಸುತ್ತಾ ಸಾಗುತ್ತಾನೆ.

18. ಅರ್ಥಾತ್- ಇದಕ್ಕಿಂತ ಮೊದಲು ಪ್ರವಾದಿಗಳು ತಮ್ಮ ಕಾಲದ ಜನಾಂಗಗಳಿಗಾಗಿ ಒಂದು ಆರಾಧನಾ ಪದ್ಧತಿಯನ್ನು ತಂದಿದ್ದರು. ಹಾಗೆಯೇ ಈ ಕಾಲದ ಜನಾಂಗಕ್ಕಾಗಿಯೂ ನೀವು ಒಂದು ಆರಾಧನಾ ಪದ್ಧತಿಯನ್ನು ತಂದಿರುವಿರಿ. ಆದ್ದರಿಂದ ಈಗ ಯಾರಿಗೂ ಆ ಬಗ್ಗೆ ಆಕ್ಷೇಪ ಮಾಡುವ ಅಧಿಕಾರವಿಲ್ಲ. ಈ ಕಾಲದ ನೈಜ ಆರಾಧನಾ ವಿಧಾನ ಇದುವೇ ಆಗಿದೆ.

ಅಲ್ಲಾಹನ ತಿಳುವಳಿಕೆಯಲ್ಲಿರುವುದು ನಿಮಗೆ ತಿಳಿಯದೇ? ಎಲ್ಲವೂ ಒಂದು ಗ್ರಂಥದಲ್ಲಿ ಉಲ್ಲೇಖಿತವಿದೆ. ಅಲ್ಲಾಹನಿಗೆ ಇದೇನೂ ಕಷ್ಟ ಸಾಧ್ಯವಲ್ಲ.

وَالْأَرْضِ ۗ إِنَّ ذَٰلِكَ فِي كِتَابٍ ۚ إِنَّ ذَٰلِكَ
عَلَى اللَّهِ يَسِيرٌ ﴿٧٠﴾

71. ಇವರು ಅಲ್ಲಾಹನನ್ನು ಬಿಟ್ಟು ಅವನು ಯಾವುದೇ ಆಧಾರ ವನ್ನಿಳಿಸಿರದ ಹಾಗೂ ಸ್ವತಃ ಅವರಿಗೇ ತಿಳಿಯದಂತಹ ವಸ್ತುಗಳ ದಾಸ್ಯ-ಆರಾಧನೆ ಮಾಡುತ್ತಾರೆ. ಈ ಅಕ್ರಮಿಗಳಿಗೆ ಯಾರೂ ಸಹಾಯಕರಿಲ್ಲ.

وَيَعْبُدُونَ مِن دُونِ اللَّهِ مَا لَمْ يُنَزِّلْ
بِهِ سُلْطَانًا وَمَا لَيْسَ لَهُم بِهِ عِلْمٌ ۗ
وَمَا لِلظَّالِمِينَ مِن نَّصِيرٍ ﴿٧١﴾

72. ಮತ್ತು ಇವರಿಗೆ ನಮ್ಮ ಸುಸ್ಪಷ್ಟ ವಚನಗಳನ್ನು ಪಠಿಸಿ ಹೇಳಿದಾಗ ಸತ್ಯನಿಷೇಧಿಗಳ ಮುಖಗಳು ವಿಕಾರಗೊಳ್ಳುವುದನ್ನು ನೀವು ನೋಡುತ್ತೀರಿ. ಇವರಿಗೆ ನಮ್ಮ ವಚನಗಳನ್ನು ಓದಿ ಹೇಳುವವರ ಮೇಲೆ ಇವರು ಈಗಲೇ ಮುಗಿಬೀಳುವರೋ ಎಂಬಂತೆ ಭಾಸವಾಗುತ್ತದೆ. ಇವರೊಡನೆ ಹೇಳಿರಿ- "ಇದಕ್ಕಿಂತಲೂ ಕೆಟ್ಟದ್ದೇನೆಂಬುದನ್ನು ನಾನು ನಿಮಗೆ ಹೇಳಲೇ? ಅಗ್ನಿ. ಸತ್ಯನಿಷೇಧಿಗಳಿಗೆ ಅಲ್ಲಾಹನು ಅದನ್ನೇ ವಾಗ್ದಾನ ಮಾಡಿದ್ದಾನೆ ಮತ್ತು ಅದು ಅತ್ಯಂತ ನಿಕೃಷ್ಟ ಸ್ಥಾನವಾಗಿದೆ."

وَإِذَا تُتْلَىٰ عَلَيْهِمْ آيَاتُنَا بَيِّنَاتٍ تَعْرِفُ
فِي وُجُوهِ الَّذِينَ كَفَرُوا الْمُنكَرَ ۖ يَكَادُونَ
يَسْطُونَ بِالَّذِينَ يَتْلُونَ عَلَيْهِمْ آيَاتِنَا ۗ
قُلْ أَفَأُنَبِّئُكُم بِشَرٍّ مِّن ذَٰلِكُمُ ۗ
النَّارُ وَعَدَهَا اللَّهُ الَّذِينَ كَفَرُوا ۖ
وَبِئْسَ الْمَصِيرُ ﴿٧٢﴾

73. ಜನರೇ, ಒಂದು ಉದಾಹರಣೆ ಕೊಡಲಾಗುತ್ತಿದೆ. ಗಮನವಿಟ್ಟು ಕೇಳಿರಿ: ನೀವು ಅಲ್ಲಾಹನನ್ನು ಬಿಟ್ಟು ಯಾವ ಆರಾಧ್ಯರನ್ನು ಪ್ರಾರ್ಥಿಸುತ್ತೀರೋ ಅವರೆಲ್ಲರೂ ಒಟ್ಟಾಗಿ ಒಂದು ನೊಣವನ್ನೂ ಸೃಷ್ಟಿಸಲಾರರು. ಮಾತ್ರವಲ್ಲ ನೊಣವು ಅವರಿಂದೇನನ್ನಾದರೂ ಕಸಿದು ಕೊಂಡೊಯ್ದರೆ ಅವರಿಗೆ ಅದನ್ನು ಬಿಡಿಸಿಕೊಳ್ಳಲಿಕ್ಕೂ ಸಾಧ್ಯವಾಗದು. ಸಹಾಯಾರ್ಥಿಗಳೂ ದುರ್ಬಲರು, ಯಾರಿಂದ ಸಹಾಯ ಬೇಡಲಾಗುತ್ತದೋ ಅವರೂ ದುರ್ಬಲರು.

يَا أَيُّهَا النَّاسُ ضُرِبَ مَثَلٌ فَاسْتَمِعُوا
لَهُ ۚ إِنَّ الَّذِينَ تَدْعُونَ مِن
دُونِ اللَّهِ لَن يَخْلُقُوا ذُبَابًا وَلَوِ
اجْتَمَعُوا لَهُ ۖ وَإِن يَسْلُبْهُمُ الذُّبَابُ
شَيْئًا لَّا يَسْتَنقِذُوهُ مِنْهُ ۚ ضَعُفَ
الطَّالِبُ وَالْمَطْلُوبُ ﴿٧٣﴾

74. ಇವರು ಅಲ್ಲಾಹನ ಮಹತ್ವವನ್ನು ಹೇಗೆ ಅರಿಯಬೇಕಿತ್ತೋ ಹಾಗೆ ಅರಿತುಕೊಳ್ಳಲೇ ಇಲ್ಲ. ವಾಸ್ತವದಲ್ಲಿ ಶಕ್ತಿಪೂರ್ಣನೂ ಮಹಾ ಪ್ರತಾಪಿಯೂ ಅಲ್ಲಾಹನೇ ಆಗಿರುತ್ತಾನೆ.

مَا قَدَرُوا اللَّهَ حَقَّ قَدْرِهِ ۗ إِنَّ اللَّهَ
لَقَوِيٌّ عَزِيزٌ ﴿٧٤﴾

75. ಅಲ್ಲಾಹನು(ತನ್ನ ಆದೇಶಗಳನ್ನು ರವಾನಿಸಲಿಕ್ಕಾಗಿ) ದೇವಚರ ರಿಂದಲೂ ಮನುಷ್ಯರಿಂದಲೂ ಸಂದೇಶವಾಹಕರನ್ನು ಆಯ್ದು ಕೊಳ್ಳುತ್ತಾನೆ. ಅವನು ಸರ್ವಶ್ರುತನೂ ಸರ್ವವೀಕ್ಷಕನೂ ಆಗಿರುತ್ತಾನೆ.

اللَّهُ يَصْطَفِي مِنَ الْمَلَائِكَةِ رُسُلًا
وَمِنَ النَّاسِ ۚ إِنَّ اللَّهَ سَمِيعٌ بَصِيرٌ ﴿٧٥﴾

76. ಅವನು ಜನರ ಮುಂದೆ ಮತ್ತು ಮರೆಯಲ್ಲಿ ಇರುವ ಎಲ್ಲವನ್ನೂ ಬಲ್ಲವನಾಗಿರುತ್ತಾನೆ. ಸಕಲ ವ್ಯವಹಾರಗಳೂ ಅವನ ಕಡೆಗೇ ಮರಳುತ್ತವೆ.

يَعْلَمُ مَا بَيْنَ أَيْدِيهِمْ وَمَا خَلْفَهُمْ ۗ وَإِلَى اللَّهِ تُرْجَعُ الْأُمُورُ ﴿٧٦﴾

77. ಸತ್ಯವಿಶ್ವಾಸಿಗಳೇ 'ಬಾಗಿರಿ' ಮತ್ತು 'ಸಾಷ್ಟಾಂಗವೆರಗಿರಿ' ಮತ್ತು ನಿಮ್ಮ ಪ್ರಭುವಿನ ದಾಸ್ಯ-ಆರಾಧನೆ ಮಾಡಿರಿ, ಸತ್ಕರ್ಮಗಳನ್ನೆಸಗಿರಿ- ಇದರಿಂದಲೇ ನಿಮಗೆ ಯಶಸ್ಸು ಸಿಗುವುದೆಂದು ನಿರೀಕ್ಷಿಸಬಹುದು.

يَا أَيُّهَا الَّذِينَ آمَنُوا ارْكَعُوا وَاسْجُدُوا وَاعْبُدُوا رَبَّكُمْ وَافْعَلُوا الْخَيْرَ لَعَلَّكُمْ تُفْلِحُونَ ۩ ﴿٧٧﴾

السجدة عند الشافعي

78. ಅಲ್ಲಾಹನ ಮಾರ್ಗದಲ್ಲಿ ಹೋರಾಡಬೇಕಾದ ರೀತಿಯಲ್ಲಿ ಹೋರಾಡಿರಿ. ಅವನು ತನ್ನ ಕಾರ್ಯಕ್ಕಾಗಿ ನಿಮ್ಮನ್ನು ಆರಿಸಿ ಕೊಂಡಿರುತ್ತಾನೆ ಮತ್ತು ಧರ್ಮದಲ್ಲಿ ನಿಮಗೇನೂ ಸಂಕೀರ್ಣತೆಯನ್ನಿರಿಸಿಲ್ಲ. ನಿಮ್ಮ ಪಿತಾಮಹರಾದ ಇಬ್‌ರಾಹೀಮರ ಸಮುದಾಯದಲ್ಲಿ ಸ್ಥಿರವಾಗಿರಿ. ಅಲ್ಲಾಹನು ಮೊದಲೂ ನಿಮ್ಮ ಹೆಸರನ್ನು 'ಮುಸ್ಲಿಮ್' ಎಂದಿಟ್ಟಿದ್ದನು ಮತ್ತು ಇದರಲ್ಲೂ (ಕುರ್‌ಆನಿನಲ್ಲೂ ನಿಮಗೆ ಇದೇ ಹೆಸರಿದೆ.) ಇದು ಸಂದೇಶವಾಹಕರು ನಿಮ್ಮ ಬಗ್ಗೆ ಸಾಕ್ಷಿಗಳಾಗಲಿಕ್ಕಾಗಿ ಮತ್ತು ನೀವು ಜನರ ಬಗ್ಗೆ ಸಾಕ್ಷಿಗಳಾಗಲಿಕ್ಕಾಗಿ (ಆಗಿರುತ್ತದೆ.) ಆದುದರಿಂದ ನಮಾಝನ್ನು ಸಂಸ್ಥಾಪಿಸಿರಿ; ಝಕಾತ್ ಕೊಡಿರಿ ಮತ್ತು ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸಿಕೊಂಡಿರಿ. ಅವನೇ ನಿಮ್ಮ ರಕ್ಷಕ ಮಿತ್ರ. ಅತ್ಯಂತ ಶ್ರೇಷ್ಠ ರಕ್ಷಕ ಮಿತ್ರನವನು ಮತ್ತು ಅತ್ಯುತ್ತಮ ಸಹಾಯಕನವನು.

وَجَاهِدُوا فِي اللَّهِ حَقَّ جِهَادِهِ ۚ هُوَ اجْتَبَاكُمْ وَمَا جَعَلَ عَلَيْكُمْ فِي الدِّينِ مِنْ حَرَجٍ ۚ مِلَّةَ أَبِيكُمْ إِبْرَاهِيمَ ۚ هُوَ سَمَّاكُمُ الْمُسْلِمِينَ مِنْ قَبْلُ وَفِي هَٰذَا لِيَكُونَ الرَّسُولُ شَهِيدًا عَلَيْكُمْ وَتَكُونُوا شُهَدَاءَ عَلَى النَّاسِ ۚ فَأَقِيمُوا الصَّلَاةَ وَآتُوا الزَّكَاةَ وَاعْتَصِمُوا بِاللَّهِ هُوَ مَوْلَاكُمْ ۖ فَنِعْمَ الْمَوْلَىٰ وَنِعْمَ النَّصِيرُ ﴿٧٨﴾

ع ١٠ ٢ ١٧